# संस्कृतशिक्षणनिर्देशनालयः

कर्णाटकसंस्कृतविश्वविद्यालये प्रधानतया चत्वारः विभागाः भवन्ति । बोधनाङ्गं, संशोधनाङ्गं, प्रकटनाङ्गं, शासनाङ्गं चेति। एतेषां द्वारा विश्वविद्यालयस्य क्रियाशक्तिः वर्धते । एतद्वारा कर्णाटकसम्बद्धानां संस्कृतकार्याणां प्रचालनम् अस्य विश्वविद्यालयस्य उद्देशः ।

बोधनं संशोधनञ्च इत्येतदुभयमपि विश्वविद्यालयस्य उद्देश्यम् । बोधनम् उन्नतस्तरीया शैक्षणिकप्रक्रिया । किन्तु प्राथमिकस्तरात् स्नातकोत्तरस्तरपर्यन्तमपि शैक्षणिकप्रगतिः क्रमशः स्यात् । एतस्यां पृष्ठभूमौ विश्वविद्यालयेन संस्कृतशिक्षणनिर्देशनालयः आरब्धः । निर्देशनालयद्वारा प्रथमा–काव्य–साहित्यपाठ्यक्रम–परीक्षादिशैक्षणिकप्रक्रियाप्रवर्तनार्थम् अपेक्षिताः प्रार्थमिकप्रक्रियाः, तत्पूरकप्रक्रियाश्च निर्वर्त्यन्ते । शिक्षकाः, छात्राः शासनमण्डली इत्येतेषां त्रयाणामपि सङ्गमनं संस्कृतशिक्षणनिर्देशनालयस्य उद्देश्यम् । विद्यार्थिनः पाठशालाः इत्येतदुभयं परस्परसम्बद्धमेवेति सर्वैः ज्ञातपूर्वमेव ।

कर्णाटकराज्यस्य संस्कृतशिक्षणव्यवस्थायाः नूतनदिशाप्रदानार्थं समुद्घाटितो वर्तते कर्णाटकसंस्कृत–विश्वविद्यालयः । तद्वारा स्नातक–स्नातकोत्तराध्ययनं, संशोधनञ्च विधातुं योग्या नवीना व्यवस्था निर्मिता वर्तते । तेन सह पदवीपूर्वसंस्कृतशिक्षणं प्रयच्छन्तीनां पाठशालानां शासनिक–शैक्षणिकव्यवस्थायाः निर्वहणाय संस्कृतशिक्षणनिर्देशनालयः विश्वविद्यालयस्य अधीनतया समुद्घाटितः ।

गतस्य शैक्षणिकवर्षस्य अन्ते आ प्राथमिकस्तरात् स्नातकोत्तरस्तरपर्यन्तं सर्वाः परीक्षाः विश्वविद्यालयेनैव सञ्चालिताः, एतावतैव फलितांशाः अपि प्रदत्ताः । अस्मात् शैक्षणिकवर्षात् पाठशालानां शासननिर्वहणाय शैक्षणिकव्यवस्थायाः बलप्रदानाय च अपेक्षिताः सर्वेऽपि प्रयत्नाः विधीयमानाः सन्ति ।

१. प्राशासनिकव्यवस्थादृष्ट्या राज्ये विद्यमानानां संस्कृतपाठशालानां निर्वहणाय बेङ्गलूरु, मैसूरु, चित्रदुर्ग, धारवाड इति चत्वारः विभागाः रचिताः वर्तन्ते । एतेषु विभागेषु पाठशालाः विभज्य प्रत्येकं पाठशालायाः सङ्केतसङ्ख्या प्रदत्ता वर्तते ।
२. प्रथमा–काव्य–साहित्य–परीक्षाः चालयन्तीनां पाठशालानां मान्यता–नवीकरणार्थं प्रयत्नः विहितः ।
३. पाठशालासु अध्यापयतां शिक्षकाणां निमित्तं दिनत्रयव्यापीनि पुनश्चेतनशिबिराणि प्रचाल्यमानानि सन्ति ।
४. गतवर्षे प्रथमा–काव्य–साहित्यपरीक्षासु उत्तमां श्रेणीं प्राप्तवद्भ्यः विभागीयपाठशालाभ्यः पुरस्कारवितरणम् ।
५. प्रथमा–काव्य–साहित्यछात्रेभ्यः विभागस्तरात् राज्यस्तरपर्यन्तं स्पर्धाः प्रचाल्य प्रतिभापुरस्कारप्रदानम् ।
६. विद्यार्थिनां प्रोत्साहार्थं छात्रवृत्तिप्रदानम् ।
७. श्रावणमासं संस्कृतमासत्वेन परिगृह्य संस्कृतोत्सवाचरणम् ।
८. नवीनः पाठ्यक्रमः अचिरादेव संयोज्यते ।

एवं कर्णाटकसंस्कृतविश्वविद्यालयस्य कुलपतेः प्रो मल्लेपुरं जि. वेङ्कटेशवर्यस्य मार्गदर्शने विनूतनयोजनाभिः सह संस्कृतशिक्षणनिर्देशनालयेन कार्यारम्भः कृतो वर्तते ।

कर्नाटकसंस्कृतविश्वविद्यालयः, पम्पमहाकविमार्गः, चामराजपेटे, बेङ्गलूरु – ५६००१८, दू – ०८० २६७० ५५९६



# सन्देशः

शतायुष्कः पण्डितः सुधाकर चतुर्वेदी
जयनगरम्, बेङ्गलूरु ।

महतः सन्तोषस्य विषयः एषः कर्णाटकराज्ये प्रथमकर्णाटक-संस्कृतविश्वविद्यालयः समारब्धः इति । प्रो. मल्लेपुरं जि. वेङ्कटेशमहाभागस्य कुलपतित्वे अयं संस्कृतविश्वविद्यालयः समुद्घाटित इति महान् आनन्दः सञ्जायते।

संस्कृतभाषा संस्कृतेः द्योतकसाधनम् । संस्कृतिर्नाम न नागरिकता । आत्मसंरक्षणोपादिका क्रिया एव संस्कृतिः इति वक्तुं शक्यते । नागरिकताः सन्ति बह्व्यः। परन्तु संस्कृतिस्तु विश्वमानवसंबद्धा एकैव भवितुमर्हति। भारतीयसंस्कृतिर्नाम न कस्यचित् भूभागस्य सम्बद्धा वर्तते। अपि तु विश्वाधारभूतस्य परमात्मनः भरतस्य। तस्य सम्बद्धा संस्कृतिरेव भारतीयसंस्कृतिः । संस्कृतिर्नाम विश्वव्यापिनी । अत एव अस्यां संस्कृतौ स्वपरभेदो वा सङ्घर्षो वा न विद्यते ।

ध्वनितं च इदं यजुर्वेदे, तथा च श्रुतिः – सा संस्कृतिः प्रथमा विश्वावारा – सर्वप्रथमतया या विश्वव्यापिनी वर्तते सैव संस्कृतिः इति अस्याः श्रुतेः तात्पर्यम् । अमुम् एव अभिप्रायं मनसिकृत्य वयम् उद्घोषयामः "वसुधैव कुटुम्बकम्" इति । एतादृश्याः विश्वसंस्कृतेः आकारभूतं संस्कृतं न मृतं, न म्रियते च ।

**– शतायुष्कः पण्डितः सुधाकर चतुर्वेदी**



केन्द्रसाहित्याकाडमी(अनुवाद)प्रशस्तिविजेता,
**शिवकविः डा ॥ परड्डि मल्लिकार्जुनः**
विश्रान्तसंस्कृतप्राध्यापकः
कर्नाटकविश्वविद्यालयः, धारवाड

# सन्देशः

कृत्वा यः संस्कृतोपेक्षां संस्कृतिं ज्ञातुमिच्छति ।
मूलाधारं विना सोऽयं गृहं निर्मातुमिच्छति ॥

यः सारस्वतवैभवं बुधनुतं बोधप्रदं काङ्क्षते
आयुर्वेदमुखेषु शास्त्रनिवहेष्वन्यादृशीं चातुरीम् ।
सङ्गीतादिकलासु कौशलमहो सारज्ञलोकादृतं
सेव्यं सर्वजनोपकारि विमलं लोकोत्तरं संस्कृतम् ॥

विश्वविद्यालये सांस्कृते नूतने
वेदवेदान्तशास्त्रोपदेशः पुनः ।
शिक्षकैः शोधकार्यैकमग्नैः सदा
छात्रवर्गोपकाराय कार्यो मुदा ॥

नीतिप्रधानविषयं खलु धर्मशास्त्रं
भूतिप्रधानविषयं खलु भौतशास्त्रम् ।
मोक्षप्रधानविषयं विविधप्रकारं
वेदान्तशास्त्रमसकृद् विशदीकृतं स्यात् ॥

यत्नः कार्यः सततमसकृत् शोधकार्यैकबद्धै :
विद्यापीठे विविधविषयज्ञानपूर्णैः प्रबुद्धैः ।
नूत्नं यद्यत् तदपि निहितं सांस्कृते वाङ्मयेऽस्मिन्
एतत्सर्वं जगति विदितं चास्तु सा मे शुभेच्छा ॥

**– शिवकविः डा ॥ परड्डि मल्लिकार्जुनः**

# ಉಡುಪಿ ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲೆ

**– ಒಂದು ಕಿರುಪರಿಚಯ**

**ಸಂ**ಸ್ಕೃತ ಭಾಷೆಗೆ ಬಂದೊದಗಿದ ಆಪತ್ತುಗಳು ಈ ಜಗತ್ತಿನಲ್ಲಿ ಬೇರೆ ಯಾವ ಭಾಷೆಗೆ ಬಂದೊದಗಿದ್ದರೂ ಅದು ಜೀವಂತವಾಗಿ ಉಳಿದಿರುತ್ತಿರಲಿಲ್ಲ. ಆದರೆ ಸಂಸ್ಕೃತವು ಆ ಎಲ್ಲಾ ಆಪತ್ತುಗಳನ್ನು ಎದುರಿಸಿ ನಿಂತು ತನ್ನತನವನ್ನು ಉಳಿಸಿಕೊಂಡು ಬೆಳಗುತ್ತಿದೆ. ಸಂಸ್ಕೃತವನ್ನು ಉಳಿಸುವಲ್ಲಿ ಪ್ರಾಚೀನ ಶೈಲಿಯಲ್ಲಿ ಸಂಸ್ಕೃತವನ್ನು ಬೋಧಿಸುತ್ತಿರುವ ಶಿಕ್ಷಣ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸಿವೆ ಎಂಬುದು ಗಮನೀಯವಾದ ಅಂಶವಾಗಿದೆ. ಇಂತಹ ಅನೇಕ ಸಂಸ್ಥೆಗಳಲ್ಲಿ ಒಂದಾದ, ಜೊತೆಗೆ ರಾಷ್ಟ್ರಸ್ತರದಲ್ಲಿ ತನ್ನದೇ ಆದ ವಿಶಿಷ್ಟಸ್ಥಾನವನ್ನು ಹೊಂದಿರುವ ಉಡುಪಿಯ ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲೆ (ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು)ಯ ಕಿರುಪರಿಚಯವು ತಮ್ಮ ಮುಂದಿದೆ.



ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜು

ದ್ವೈತಸಿದ್ಧಾಂತವನ್ನು ಜಗತ್ತಿಗೆ ನೀಡಿದ ಆಚಾರ್ಯ ಮಧ್ವರ ಕಾಲದಲ್ಲಿ ಉಡುಪಿಯ ಶ್ರೀ ಅನಂತೇಶ್ವರ ದೇವಸ್ಥಾನದಲ್ಲಿ ಶಾಸ್ತ್ರಗಳ ಪಾಠಪ್ರವಚನಗಳು ನಡೆಯುತ್ತಿದ್ದ ಬಗ್ಗೆ, ಮಧ್ವಾಚಾರ್ಯರೇ ಸ್ವತಃ ಅಧ್ಯಾಪನವನ್ನು ನಡೆಸಿದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಹೀಗೆ ಅನೇಕ ಶತಮಾನಗಳಿಂದ ಮುಂದುವರಿದು ಬಂದ ಈ ಶಿಕ್ಷಣ ಪರಂಪರೆಯು ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಬಂದಿದ್ದು, ಇಂದು ಶ್ರೀಮನ್ಮಧ್ವಸಿದ್ಧಾಂತಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲೆಯಾಗಿ ಮೈದಳೆದು ನಿಂತಿದೆ. ಕರ್ನಾಟಕದ ಬೆರಳೆಣಿಕೆಯ ಪ್ರಾಚೀನ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿ ಗುರುತಿಸಲ್ಪಡುತ್ತಿದೆ. ಉಡುಪಿಯ ಅಷ್ಟಮಠಾಧೀಶರು ಸಂಸ್ಕೃತ ಶಿಕ್ಷಣವನ್ನು ಸಾರ್ವಜನಿಕವನ್ನಾಗಿ ಮಾಡಬೇಕೆಂಬ ಮಹದುದ್ದೇಶದಿಂದ 1904ರಲ್ಲಿ ಶ್ರೀಮನ್ಮಧ್ವಸಿದ್ಧಾಂತಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲೆಯೆಂಬ ಹೊಸ ಸಂಸ್ಥೆಯನ್ನು ಹುಟ್ಟುಹಾಕಿದರು. ಆರಂಭದಲ್ಲಿ ಇದು ಸಂಸ್ಕೃತ ಪಾಠಶಾಲೆಯೆಂದು ಪರಿಗಣಿತವಾಗಿದ್ದರೂ 1919ರಲ್ಲಿ ಮಹಾಪಾಠಶಾಲೆಯಾಗಿ ರೂಪುಗೊಂಡು ಆಗಿನ ಮದರಾಸಿನ ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ಪಡೆದ ಅಧೀನ ಸಂಸ್ಥೆಯಾಗಿ ರೂಪುಗೊಂಡಿತು. ಆರಂಭದ ದಿನಗಳಲ್ಲಿ ಉಡುಪಿಯ ಶ್ರೀ ಅನಂತೇಶ್ವರ ಮತ್ತು ಚಂದ್ರಮೌಳೀಶ್ವರ ದೇವಾಲಯಗಳಲ್ಲೇ ನಡೆಯುತ್ತಿದ್ದ ಈ ಶಾಲೆಯು ಮುಂದೆ ಉಡುಪಿ ಕಡೆಕೊಪ್ಪಲಮಠಕ್ಕೆ ಸ್ಥಳಾಂತರಗೊಂಡಿತು. ಮುಂದೆ 1951ರಲ್ಲಿ ಅಷ್ಟಮಠಾಧೀಶರ ಹಾಗೂ ಸಂಸ್ಕೃತಾಭಿಮಾನಿಗಳ ಪರಿಶ್ರಮದಿಂದ ರೂಪುಗೊಂಡ ಭವ್ಯವಾದ ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡು ಸ್ವತಂತ್ರ ಅಸ್ತಿತ್ವವನ್ನು ಹೊಂದಿತು. ಇಂದು ಇದು ಕಾಸರಗೋಡು, ದಕ್ಷಿಣ ಕನ್ನಡ ಮತ್ತು ಉಡುಪಿ – ಈ ಮೂರು ಜಿಲ್ಲೆಗಳಿಗಿರುವ ಏಕೈಕ ಸಂಸ್ಕೃತ ಮಹಾವಿದ್ಯಾಲಯವಾಗಿ ನಿಂತಿದೆ. 'ಎಸ್.ಎಂ.ಎಸ್.ಪಿ. ಸಭಾ (ರಿ.)' ಎಂಬ ಆಡಳಿತ ಮಂಡಳಿಯು ಇದರ ನಿರ್ವಹಣೆಯನ್ನು ನಡೆಸುತ್ತಿದ್ದು, ಶ್ರೀಕೃಷ್ಣಪೂಜಾ ದೀಕ್ಷಿತರಾದ ಪರ್ಯಾಯ ಪೀಠಾಧೀಶ್ವರರು ಇದರ ಅಧ್ಯಕ್ಷರಾಗಿರುತ್ತಾರೆ. ಜೊತೆಗೆ ಸಚಿವರಾದ ಡಾ. ವಿ.ಎಸ್. ಆಚಾರ್ಯ, ವಿದ್ವಾಂಸರಾದ ಬನ್ನಂಜೆ ಗೋವಿಂದ ಆಚಾರ್ಯ ಮೊದಲಾದವರು ಈ ಮಂಡಳಿಯ ಸದಸ್ಯರಾಗಿರುವುದು ಈ ಸಂಸ್ಥೆಗೆ ಪ್ರತಿಷ್ಠೆಯನ್ನು ತಂದುಕೊಟ್ಟಿದೆ.

**ಪಾಠಪ್ರವಚನಗಳು:**

1968ರಲ್ಲಿ ವಿವಿಧ ಸಂಸ್ಕೃತ ಪರೀಕ್ಷೆಗಳಿಗೆ ಸಂಬಂಧಿಸಿದ ತರಗತಿಗಳನ್ನು ನಡೆಸಲು ಸರ್ಕಾರದ ಶಾಶ್ವತ ಮನ್ನಣೆಯು ದೊರಕಿದ್ದು ಸರ್ಕಾರದ ಅನುದಾನ ಮತ್ತು ಅಷ್ಟಮಠಾಧೀಶರ ಅನುಗ್ರಹದೊಂದಿಗೆ ವಿವಿಧ ಶಾಸ್ತ್ರಗಳ ಬೋಧನೆಯು

ಕಾದಂಬರೀಕಾರರಾದ ಶ್ರೀ ಸತ್ಯಕಾಮ, ಸಂಗೀತ-ಸಾಹಿತ್ಯವಿಶಾರದ ಶ್ರೀ ಮಟಪಾಡಿ ರಾಜಗೋಪಾಲಾಚಾರ್ಯರು, ಪ್ರಸಿದ್ಧ ವಿದ್ವಾಂಸರಾದ ಶ್ರೀ ಸಾಣೂರು ಭೀಮ ಭಟ್ ಮೊದಲಾದವರು ಈ ಸಂಸ್ಥೆಯ ಹೆಸರನ್ನು ಉತ್ತುಂಗಕ್ಕೇರಿಸಿದ್ದಾರೆ. ಪ್ರಸ್ತುತ ಸಂಸ್ಕೃತಕ್ಕಾಗಿಯೇ ಜೀವನವನ್ನು ಮುಡಿಪಾಗಿಟ್ಟಿರುವ 'ಸಂಸ್ಕೃತ ಭಾರತಿ'ಯ ಡಾ. ಎಚ್.ಆರ್. ವಿಶ್ವಾಸ್, ವಿದ್ವಾನ್ ಜನಾರ್ದನ ಹೆಗಡೆ ಮೊದಲಾದವರು ಈ ಸಂಸ್ಥೆಯ ಅಕ್ಕರೆಯ ಕಂದಮ್ಮಗಳು. ಇದರೊಂದಿಗೆ ಪ್ರತಿ ವರ್ಷವೂ ರಾಜ್ಯ ಮತ್ತು ರಾಷ್ಟ್ರಸ್ತರದಲ್ಲಿ ನಡೆಯುವ ಸಂಸ್ಕೃತ ಸ್ಪರ್ಧೆಗಳಲ್ಲಿ ಹೆಚ್ಚಿನ ಪಾರಿತೋಷಕಗಳನ್ನು ಪಡೆಯುತ್ತಿರುವ ವಿದ್ಯಾರ್ಥಿಗಳು ಈ ಸಂಸ್ಥೆಯ ಹೆಸರನ್ನು ಹೆಚ್ಚಿಸಿದ್ದಾರೆ.



ಪ್ರಾರ್ಥನಾನಿರತ ವಿದ್ಯಾರ್ಥಿಗಳು

**ಕಾರ್ಯವೈವಿಧ್ಯ:**

ಪ್ರತಿನಿತ್ಯದ ಪಾಠಪ್ರವಚನಗಳೊಂದಿಗೆ 'ರುಚಿರ ಭಾರತೀ ಸಭಾ', 'ಕಾವ್ಯ ಶಾಸ್ತ್ರ ವಿಚಾರ ಪರಿಷತ್'ಗಳ ಮೂಲಕ ವಿದ್ಯಾರ್ಥಿಗಳು ತಮ್ಮ ವಾಕ್ಚಾತುರ್ಯವನ್ನು ಹೆಚ್ಚಿಸಿಕೊಳ್ಳಲು ಮತ್ತು ವಿವಿಧ ರಂಗದ ಪರಿಣತರಿಂದ ಹೊಸ ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. 'ಅಖಿಲ ಭಾರತ ಶಾಸ್ತ್ರಾರ್ಥಗೋಷ್ಠೀ', 'ಅಖಿಲ ಕರ್ನಾಟಕ ಸಂಸ್ಕೃತ ಸಮ್ಮೇಳನ', 'ಜಿಲ್ಲಾ ಸಂಸ್ಕೃತ ಸಮ್ಮೇಳನ', 'ದಕ್ಷಿಣ ಭಾರತ ಪ್ರಾಂತೀಯ ವೇದ ಸಮ್ಮೇಳನ', 'ಶ್ರೀವಾದಿರಾಜ ಗುರು ಸಾರ್ವಭೌಮ ಶಾಸ್ತ್ರಾರ್ಥ ವಿಚಾರ ಸಂಕೀರ್ಣ', 'ರಾಜ್ಯಸ್ತರೀಯ ಶಾಸ್ತ್ರವಾಕ್ಸ್ಪರ್ಧಾ'ಯೋಗಿತಾ', 'ಸಂಸ್ಕೃತ ಸಂಭಾಷಣಾ ಶಿಬಿರಗಳ ಆಂದೋಲನ', ಮುಂತಾದ ಸಂಸ್ಕೃತ ಪ್ರಚಾರ-ಪ್ರಸಾರ ಕಾರ್ಯಕ್ರಮಗಳನ್ನು ಈ ಸಂಸ್ಥೆಯು ಯಶಸ್ವಿಯಾಗಿ ಪೂರೈಸಿದೆ.

ಮಂತ್ರಸಂಗ್ರಹ, ಅನ್ವಾಧಾನಸಂಗ್ರಹ, ಸಾಹಿತ್ಯವಲ್ಲರೀ, ಸುಬಂತಕೌಮುದೀ, ತ್ರಿಭಾಷಾ ಸೂಕ್ತಿ, ಗೀತೆಗೊಂದು ಕಡಗೋಲು, ಪ್ರಾಣಚಿಂತನೆ, ನಮ್ಮ ವಿಕೃತ ಆಚಾರವಿಚಾರಗಳು –ಹೀಗೆ ಹತ್ತು ಹಲವು ಕೃತಿಗಳು ಇಲ್ಲಿಯ ಅಧ್ಯಾಪಕವರ್ಗದವರಿಂದ ರಚಿತವಾಗಿವೆ. ಇಲ್ಲಿಯ ಅಧ್ಯಾಪಕರು ರಚಿಸಿದ 'ಗದಾಯುದ್ಧಂ', 'ಕಂಸವಧಂ' ಮೊದಲಾದ ಸಂಸ್ಕೃತ ಯಕ್ಷಗಾನ ಕೃತಿಗಳನ್ನು ವಿದ್ಯಾರ್ಥಿಗಳ ಮೂಲಕ ಅಭಿನಯಿಸಿ ಯಕ್ಷಗಾನ ಕ್ಷೇತ್ರಕ್ಕೆ ಹೊಸ ಕೊಡುಗೆಯನ್ನಿತ್ತಿದ್ದಾರೆ.

ಹೀಗೆ ಹತ್ತು ಹಲವಾರು ಮುಖಗಳಿಂದ ಸಮಾಜದತ್ತ ತೆರೆದುಕೊಂಡಿರುವ ಶ್ರೀಮನ್ಮಧ್ವಸಿದ್ಧಾಂತಪ್ರಬೋಧಿನೀ ಸಂಸ್ಕೃತ ಮಹಾಪಾಠಶಾಲೆಯು ಅಧ್ಯಾಪಕರ ಕೊರತೆ, ಪೀಠೋಪಕರಣಗಳ ಅಭಾವ ಇತ್ಯಾದಿ ಸಮಸ್ಯೆಗಳನ್ನೊಳಗೊಂಡಿದ್ದು, ಕರ್ನಾಟಕದ ಸಮಸ್ತ ಸಂಸ್ಕೃತ ಪ್ರಿಯರ ಆನಂದಕ್ಕೆ ಕಾರಣವಾಗಿರುವ ನಮ್ಮ 'ಸಂಸ್ಕೃತ ವಿಶ್ವವಿದ್ಯಾಲಯ'ದ ನೆರಳಿನಲ್ಲಿ ತನ್ನೆಲ್ಲ ಸಮಸ್ಯೆಗಳನ್ನು ನೀಗಿಸಿಕೊಳ್ಳುವ ವಿಶ್ವಾಸವನ್ನು ಹೊಂದಿದೆ.

1980ರಲ್ಲಿ ತನ್ನ ರತ್ನಮಹೋತ್ಸವವನ್ನು ಈ ಸಂಸ್ಥೆಯು ವೈಭವದಿಂದ ಆಚರಿಸಿಕೊಂಡಿತು. 'ಶೇವಧಿಃ' ಎಂಬ ಸ್ಮರಣ ಸಂಚಿಕೆಯನ್ನು ಆ ಸಂದರ್ಭದಲ್ಲಿ ಹೊರತರಲಾಯಿತು. 2004ರಲ್ಲಿ ನಾಡಿನ ವಿವಿಧ ಮಠಾಧಿಪತಿಗಳ, ಸಮಾಜದ ಗಣ್ಯರ, ರಾಷ್ಟ್ರದ ವಿವಿಧ ಭಾಗಗಳಿಂದಾಗಮಿಸಿದ ಸಂಸ್ಕೃತ ವಿದ್ವಾಂಸರ ಉಪಸ್ಥಿತಿಯಲ್ಲಿ ಈ ಸಂಸ್ಥೆಯ ಶತಮಾನೋತ್ಸವವು ಅತ್ಯಂತ ವೈಭವದಿಂದ ಸಂಪನ್ನಗೊಂಡಿತು. ಈ ಸಂದರ್ಭದಲ್ಲಿ ಹೊರಬಂದ 'ಯೋಗಮಾಯಾ' ಎಂಬ ಸ್ಮರಣ ಸಂಚಿಕೆಯು ಒಂದು ಸಂಗ್ರಾಹ್ಯ ಕೃತಿಯಾಗಿ ಮೂಡಿಬಂದಿದೆ. ಹೀಗೆ ನೂರು ಸಂವತ್ಸರಗಳನ್ನು ಪೂರೈಸಿ ನವತರುಣನಂತೆ ಉತ್ಸಾಹದಿಂದ ಸಂಸ್ಕೃತದ ಸೇವೆಯನ್ನು ನಡೆಸುತ್ತಿರುವ ಈ ಸಂಸ್ಥೆಯು ತನ್ನ ನೂರ ಇಪ್ಪತ್ತೈದನೆಯ ವರ್ಷದ ಸಂಭ್ರಮಾಚರಣೆಯನ್ನು ಎದುರುನೋಡುತ್ತಿದೆ.

● **ವಿದ್ವಾನ್ ಡಿ.ಎಸ್. ಅಮೃತೇಶಾಚಾರ್ಯ**

ಸಹಾಯಕ ಪ್ರಾಧ್ಯಾಪಕರು

ಶಾಸ್ತ್ರಿಗಳ ಮನೆಯಲ್ಲೇ ನಡೆಯುತ್ತಿತ್ತು. ಸ್ನಾನಾಹ್ನಿಕಗಳ ಅನಂತರ ಬೆಳಿಗ್ಗೆ 9 ಗಂಟೆಯಿಂದ 12ರವರೆಗೆ ಮತ್ತು ಮಧ್ಯಾಹ್ನ 4ರಿಂದ 6ರವರೆಗೆ ತರ್ಕಶಾಸ್ತ್ರದ ಪ್ರೌಢಗ್ರಂಥಗಳ ಪಾಠ ಮಾಡುತ್ತಿದ್ದರು. ರಾಮಶಾಸ್ತ್ರಿಗಳ ಪ್ರಸಿದ್ಧಿ ಹರಡುತ್ತಿದ್ದಂತೆ ಅಪಾರವಾದ ಶಿಷ್ಯವರ್ಗವೂ ಬೆಳೆಯಿತು. ಆಂಧ್ರ ಮತ್ತು ತಮಿಳುನಾಡುಗಳಿಂದ ಶಿಷ್ಯತ್ವವನ್ನು ಅರಸಿ ಬಂದುದುಂಟು. ಇವರಲ್ಲಿ ತ್ರಿಮತಸ್ಥರೂ ಶಿಷ್ಯರಾಗಿದ್ದರೆಂಬುದು ಒಂದು ವಿಶೇಷ.

ಕುಣಿಗಲ ರಾಮಶಾಸ್ತ್ರಿಗಳು ಪ್ರತಿದಿನವೂ ಅರಮನೆಗೆ ಹೋಗಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ವೇದಾಶೀರ್ವಾದ ಮಾಡಿ ಬರುತ್ತಿದ್ದರು. ಮೈಸೂರಿಗೆ ಬಂದ ಹೊರಗಿನ ವಿದ್ವಾಂಸರನ್ನು ವಾಕ್ಯಾರ್ಥದಲ್ಲಿ ಎದುರಿಸಿ ಆಸ್ಥಾನದ ಗೌರವವನ್ನು ರಕ್ಷಿಸುತ್ತಿದ್ದರು. ಒಮ್ಮೆ 1850ರಲ್ಲಿ ನಡೆದ ಘಟನೆ ಚಿರಸ್ಮರಣೀಯವಾದುದು. ತರ್ಕಶಾಸ್ತ್ರದಲ್ಲಿ ಉದ್ದಾಮ ಪಂಡಿತನಾಗಿದ್ದ ವೆಂಕಟರಾಯ ಶಾಸ್ತ್ರಿ ಎಂಬುವನು ಅರಮನೆಗೆ ಬಂದು ವಾಕ್ಯಾರ್ಥವನ್ನು ಪ್ರಾರಂಭಿಸಿದ. ಆ ದಿನಗಳಲ್ಲಿ ರಾಮಶಾಸ್ತ್ರಿಗಳು ಮೈಸೂರಿನಲ್ಲಿ ಇರಲಿಲ್ಲ. ಆಂಧ್ರಪಂಡಿತನು ಉತ್ತರಭಾರತದಲ್ಲಿ ಪ್ರಚಲಿತವಾಗಿದ್ದ ವಾದಪ್ರಕಾರವನ್ನು ಮಂಡಿಸಿದನು. ಮೈಸೂರಿನ ವಿದ್ವಾಂಸರಿಗೆ ಅದನ್ನು ಅರ್ಥಮಾಡಿಕೊಂಡು ವಾದಮಾಡಲು ಸಾಧ್ಯವಾಗಲಿಲ್ಲ. ಇದರಿಂದ ಮಹಾರಾಜರಿಗೆ ಬಹಳ ದುಃಖವಾಗಿ ಆಸ್ಥಾನಕ್ಕೆ ಅವಮಾನವೊದಗಿತಲ್ಲಾ ಎಂದು ಚಿಂತಿಸಿದರು. ಅರಮನೆಯ ಭಕ್ಷಿಯು ಇದನ್ನು ತಿಳಿದು ಶಾಸ್ತ್ರಿಗಳ ಬಳಿಗೆ ಹೋಗಿ ನಡೆದ ಸಂಗತಿಗಳನ್ನೆಲ್ಲಾ ತಿಳಿಸಿದನು. ರಾಮಶಾಸ್ತ್ರಿಗಳು ತಮ್ಮ ಅನಾರೋಗ್ಯವನ್ನು ಲೆಕ್ಕಿಸದೇ ಅರಮನೆಗೆ ಬಂದು ವಾದಿಯ ಕೋಟಿಗಳನ್ನು ಕೇಳುತ್ತಲೇ ಅಷ್ಟೇ ಪ್ರೌಢವಾದ ಕೋಟಿಗಳನ್ನು ಏರಿಸುತ್ತಾ ಹೋಗಿ ಆತನನ್ನು ಸೋಲಿಸಿದರು. ಈ ವಾಕ್ಯಾರ್ಥವು ಒಟ್ಟು ಎಂಟು ದಿನಗಳ ಕಾಲ ನಡೆಯಿತು. ಮಹಾರಾಜರ ಆಸ್ಥಾನದ ಮರ್ಯಾದೆ ಉಳಿಯಿತು. ಅನಂತರ ತಮ್ಮ ಶಿಷ್ಯರಿಗೆ ಪ್ರಾಚೀನಪದ್ಧತಿಯಾದ ಪ್ರಕಾರವಿಧಿಯ ಜೊತೆಗೆ ನವೀನ ಪದ್ಧತಿಯಾದ ಅನುಗಮವಿಧಿಯಲ್ಲಿಯೂ ಪಾಠ ಹೇಳಲು ಪ್ರಾರಂಭಿಸಿದರು.

ರಾಮಶಾಸ್ತ್ರಿಗಳು 1845ರಲ್ಲಿ ದಕ್ಷಿಣ ದೇಶದ ಸಂಚಾರವನ್ನು ಕೈಗೊಂಡು ಪುದುಕೋಟೆ, ಕಾಂಚೀಪುರ ಮುಂತಾದ ನಗರಗಳಲ್ಲಿ ವಿದ್ವಾಂಸರ ಜೊತೆಗೆ ವಾಕ್ಯಾರ್ಥ ನಡೆಸಿ ವಿದ್ವತ್ ಜಯಭೇರಿ ಗಳಿಸಿದರು. ಅನಂತರ ಮೈಸೂರಿಗೆ ಬಂದು ತರ್ಕಶಾಸ್ತ್ರದಲ್ಲಿ ಅವರಿಗೆ ಸ್ಥಿರಸ್ಥಾನ ಗಳಿಸಿಕೊಟ್ಟ ಶತಕೋಟಿ ಎಂಬ ಗ್ರಂಥವನ್ನು ರಚಿಸಿದರು. ಎರಡನೇ ಬಾರಿ ದಕ್ಷಿಣದೇಶದ ಸಂಚಾರವನ್ನು ಕೈಗೊಂಡು ಕಂಚಿ ಮುಂತಾದ ಕಡೆ ವಾಕ್ಯಾರ್ಥಗಳನ್ನು ನಡೆಸಿದರು. ಇದೇ ಸಂದರ್ಭದಲ್ಲಿ ನವಕೋಟಿ ಎಂಬ ಗ್ರಂಥವನ್ನು ರಚಿಸಿದರು. ಅವರು ಹೋದ ಕಡೆಯಲ್ಲೆಲ್ಲಾ ಇವರಿಗೆ ವಿದ್ವತ್ ಸಂಭಾವನೆ ಮತ್ತು ಪುರಸ್ಕಾರಗಳು ದೊರಕಿದವು. ರಾಮಶಾಸ್ತ್ರಿಗಳಿಗೆ ಮೂವರು ಗಂಡುಮಕ್ಕಳೂ ಒಬ್ಬಳು ಹೆಣ್ಣುಮಗಳೂ ಇದ್ದರು. ಹಿರಿಯ ಮಗ ಲಕ್ಷ್ಮೀನರಸಿಂಹ ಶಾಸ್ತ್ರಿ ತಂದೆಯಷ್ಟೇ ಮೇಧಾವಿ. ಎರಡನೆಯ ಮಗ ಯಜ್ಞನಾರಾಯಣ ಶಾಸ್ತ್ರಿ ವೇದ, ಕಾವ್ಯ ಹಾಗೂ ತರ್ಕದಲ್ಲಿ ಪಂಡಿತನಾಗಿದ್ದ. ಈತನೂ, ಇವನ ತಂಗಿ ಶ್ರೀಲಕ್ಷ್ಮೀ 1865ರಲ್ಲಿ ಒಂದೇ ದಿನ ಮೃತರಾದರು. ಕೊನೆಯ ಮಗ ಶಿವಸ್ವಾಮಿ ಸನ್ಯಾಸ ಸ್ವೀಕರಿಸಿ ಶೃಂಗೇರಿಯ ಜಗದ್ಗುರುಗಳಾಗಿ 1912ರಲ್ಲಿ ಮುಕ್ತರಾದರು.

ಕುಣಿಗಲ ರಾಮಶಾಸ್ತ್ರಿಗಳು ಪಾಂಡಿತ್ಯ ಮತ್ತು ಪ್ರತಿಭೆಗಳ ಸಂಗಮವಾಗಿದ್ದರು. ಇವರು ಬರೆದ **ಶತಕೋಟಿ, ಪಂಚವಾದ** ಮತ್ತು **ಉತ್ತರವಾದ** ಗ್ರಂಥಗಳನ್ನು ನವದ್ವೀಪ, ಕಾಶಿ, ದರ್ಭಾಂಗ, ಪ್ರಯಾಗ ಮುಂತಾದ ಕಡೆಗಳಲ್ಲಿದ್ದ ವಿದ್ವಾಂಸರು ಮೈಸೂರಿಗೆ ಬಂದು ಪ್ರತಿಗಳನ್ನು ಮಾಡಿಕೊಂಡು ಇವರ ವಾಕ್ಯಾರ್ಥಕೌಶಲವನ್ನು ಉತ್ತರದಲ್ಲಿ ಪ್ರಚಾರ ಮಾಡಿದರು. ಇಂತಹ ಮಹಾವಿದ್ವಾಂಸರು 1859ರಲ್ಲಿ ನಿರ್ಯಾಣವನ್ನು ಹೊಂದಿದರು. ಕುಣಿಗಲ ರಾಮಶಾಸ್ತ್ರಿಗಳು ಮೈಸೂರು ಸೀಮೆಯ ವಿದ್ವತ್ತನ್ನು ವಿಸ್ತರಿಸಿದ ಮಹಾಪಂಡಿತರಲ್ಲಿ ಒಬ್ಬರಾಗಿ ವಿಖ್ಯಾತರಾದರು. ಇವರು ವೇದಾಂತ ಮತ್ತು ತರ್ಕಶಾಸ್ತ್ರದ ಕ್ಷೇತ್ರದಲ್ಲಿ ಅನನ್ಯವಾದ ಸಿದ್ಧಿಯನ್ನು ಪಡೆದು ಕರ್ನಾಟಕ ಸಂಸ್ಕೃತ ಪರಂಪರೆಯ ಮೂರ್ಧನ್ಯರಾದರು.

**● ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**उदारचरितानां तु वसुधैव कुटुम्बकम् ।**

**ಉದಾರ ಮನಸ್ಸಿನವರಿಗೆ ಪ್ರಪಂಚವೇ ಕುಟುಂಬ.**

ಸಂಸ್ಕೃತಕ್ಕಾಗಿ ನೂರಾರು ಕೋಟಿರೂಪಾಯಿಗಳನ್ನು ಪಂಚವಾರ್ಷಿಕ ಯೋಜನೆಯಲ್ಲಿ ಕಾದಿರಿಸಿದೆ. ಆದರೆ ದರ್ಶನಶಾಸ್ತ್ರ, ಇನ್ನಿತರ ಜ್ಞಾನಪ್ರಕಾರಗಳನ್ನು ತಳಸ್ಪರ್ಶಿಯಾಗಿ ಪಾಠಮಾಡಬಲ್ಲವರು ಇಲ್ಲ. ಪಾಠ ಕಲಿಯುವವರೂ ಇಲ್ಲದಂತಾಗಿದೆ. ಹೀಗಾಗಿ ಶಾಸ್ತ್ರಗಳ ಪ್ರೌಢಹಂತದ ಅಧ್ಯಯನ ಕನಸಿನ ವಿಷಯ. ಎಲ್ಲೆಡೆ ಸಂಸ್ಕೃತವನ್ನು ಭಾಷೆಯಾಗಿ ಪ್ರಾಥಮಿಕ ಹಂತದಲ್ಲಿ ಕಲಿಸುವ ಕೆಲಸ ಅತ್ಯಲ್ಪ ಪ್ರಮಾಣದಲ್ಲಿ ನಡೆಯುತ್ತಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವೂ ಕೂಡ ಸಂಸ್ಕೃತವನ್ನು ಭಾಷೆಯ ರೂಪದಲ್ಲಿ ಕಲಿಸಲು ಹೊಸ ಹೊಸ ಯೋಜನೆಗಳನ್ನು ಹಾಕಿಕೊಳ್ಳಬೇಕು. ಹೀಗಾದಾಗ ಸಂಸ್ಕೃತದ ಪ್ರಥಮಸೋಪಾನವನ್ನಾದರೂ ಉಳಿಸಿಕೊಂಡಂತಾಗುತ್ತದೆ.

**ಸಂದರ್ಶಕ:** ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಮುಂತಾದ ವೇದಾಂತಶಾಖೆಗಳು ಅನುಭವದ ವಿಷಯುವಾಗಬೇಕಿತ್ತು. ಆದರೆ ಇಂದು ಅನುಭವವಿಲ್ಲದೆಯೇ ಕಾದಾಟ ನಡೆಯುತ್ತಿದೆಯಲ್ಲ?

**ಆಚಾರ್ಯರು:** ಇದೊಂದು ಅತ್ಯಂತ ಸಾಮಯಿಕ ಪ್ರಶ್ನೆ. ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ ಎಂಬ ಪ್ರಸ್ಥಾನತ್ರಯಕ್ಕೆ ಆಚಾರ್ಯರು ತಾವು ಹೊಂದಿದ ಕಾಣ್ಕೆಯಂತೆ ಭಾಷ್ಯವನ್ನು ಅನುಗ್ರಹಿಸಿದ್ದಾರೆ. ಅದನ್ನು ಅಧ್ಯಯನ ಮಾಡಿ ತತ್ತ್ವಾನುಸಂಧಾನ ಮಾಡಿ ಸಾಕ್ಷಾತ್ಕಾರವನ್ನು ಹೊಂದಬೇಕು. ಇದು ಜೀವನದ ಚರಮ ಧ್ಯೇಯ. ಸಾಕ್ಷಾತ್ಕಾರ ನೂರನೇ ಮೆಟ್ಟಿಲಾಗಿರಬಹುದು. ಆದರೆ ನಾವು ಇನ್ನೂ ಎರಡು ಅಥವಾ ಮೂರನೇ ಮೆಟ್ಟಿಲನ್ನು ಏರಿದ್ದೇವೆ. ಕಾಣದ ದೃಶ್ಯದ ಬಗ್ಗೆ ಊಹಾಪೋಹಮಾಡಿಕೊಂಡು ವಾದ ವಿವಾದಗಳನ್ನು ನಡೆಸುತ್ತಿದ್ದೇವೆ. ಖಂಡನೆ ಮಂಡನೆಗಾಗಿ ಲೆಕ್ಕವಿಲ್ಲದಷ್ಟು ಲೇಖನಗಳು ಪುಸ್ತಕಗಳು ಪ್ರಕಟವಾಗಿವೆ. ರಾಗದ್ವೇಷಗಳು ಹೆಚ್ಚಾಗಿವೆ. ಮನಸ್ಸಮಾಧಾನವೆಂಬುದು ದೊರೆಯಲೇ ಇಲ್ಲ. ಈ ಹಂತದಲ್ಲಿ ಇದನ್ನು ನೆನಪಿಸಿ ಕೊಳ್ಳಬೇಕು.

**ಶಮಾರ್ಥಂ ಸರ್ವಶಾಸ್ತ್ರಾಣಿ ವಿಹಿತಾನಿ ಮನೀಷಿಭಿಃ ।**
**ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ ಶಾಂತಮಿದಂ ಮನಃ ॥**

**ಸಂದರ್ಶಕ:** ವೇದಶಾಸ್ತ್ರಗಳ ಅಧ್ಯಯನ ಕೆಲವರಿಗೆ ಮಾತ್ರ ಸೀಮಿತವೇ?

**ಆಚಾರ್ಯರು:** ಖಂಡಿತವಾಗಿಯೂ ಇಲ್ಲ. ಆಸಕ್ತರೆಲ್ಲರೂ ಇದಕ್ಕೆ ಅರ್ಹರು. ಜನರ ಮನಸ್ಸನ್ನು ಹದಗೊಳಿಸಲೆಂದೆ ಸಂಸ್ಕಾರಕೊಡಲು ವೇದಶಾಸ್ತ್ರಗಳು ಪ್ರವೃತ್ತವಾಗಿವೆ. ಆದ್ದರಿಂದ ವೇದಶಾಸ್ತ್ರಾಧ್ಯಯನವನ್ನು ಆಸಕ್ತರೆಲ್ಲರೂ ಮಾಡಬಹುದು. ಸ್ತ್ರೀಯರೂ ಅಧ್ಯಯನ ಮಾಡಬಹುದೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

**ಸಂದರ್ಶಕ:** ತಮ್ಮ ಅಧ್ಯಯನ ದಿನಗಳ ಬಗ್ಗೆ ಮೆಲುಕು ಹಾಕಬಹುದಲ್ಲ?

**ಆಚಾರ್ಯರು:** ಓಹೋ! ಅವಶ್ಯವಾಗಿ. ನನ್ನದೇ ಹೆಸರಿನ ಇನ್ನೂ ಇಬ್ಬರು ದಿವಂಗತ ಇ.ಎಸ್. ವರದಾಚಾರ್ಯರು (ಮೀಮಾಂಸಾ), ಎಸ್. ವರದಾಚಾರ್ಯರು (ವ್ಯಾಕರಣ) ನನ್ನ ಸಹಪಾಠಿಗಳಾಗಿದ್ದರು. ಹೀಗಾಗಿ ನಮ್ಮನ್ನು ವರದತ್ರಯರೆಂದು ಎಲ್ಲರೂ ಗೌರವಿಸುತ್ತಿದ್ದರು. ನಮ್ಮ ಗುರುಗಳು ದೀಕ್ಷಾಚಾರ್ ಎಂಬುವವರು. ನಾವು ಮನೆಯಿಂದ ಸಂಸ್ಕೃತ ಪಾಠಶಾಲೆಗೆ ನಡೆದುಕೊಂಡೇ ಹೋಗುತ್ತಿದ್ದೆವು. ದಾರಿಯುದ್ದಕ್ಕೂ ಸೂತ್ರ ಹಾಗೂ ಭಾಷ್ಯಗಳ ವಾಕ್ಯಗಳನ್ನು ಆವೃತ್ತಿಮಾಡುವುದು ನಮ್ಮ ಪ್ರವೃತ್ತಿಯಾಗಿತ್ತು. ಇದನ್ನು ನೋಡುತ್ತಿದ್ದ ಗೃಹಸ್ಥರು ಈ ರಸ್ತೆಯ ಗಿಡಮರಗಳಿಗೂ ಸೂತ್ರಭಾಷ್ಯ ಕಂಠಸ್ಥವಾಗಿದೆ ಎಂದು ಹಾಸ್ಯಮಾಡುತ್ತಿದ್ದರು. ಆಗ ನಮಗೆ ಶಾಸ್ತ್ರಚಿಂತನೆ ಎಂಬ ಏಕಾಂಶಕಾರ್ಯಕ್ರಮ ಮಾತ್ರ ಇರುತ್ತಿತ್ತು. ಭೂತ ಭವಿಷ್ಯದ ಬಗ್ಗೆ ಚಿಂತೆ ಇರುತ್ತಿರಲಿಲ್ಲ. ಸ್ವಾಧ್ಯಾಯವನ್ನು ನಾವು ತಪಸ್ಸನ್ನಾಗಿಯೇ ಭಾವಿಸಿದ್ದೆವು.

**ಸಂದರ್ಶಕ:** ತಾವು ಸ್ಥಾಪಿಸಿರುವ ಗುರುಕುಲದ ಗುರಿ ಏನು?

**ಆಚಾರ್ಯರು:** ಇದೊಂದು ಪ್ರಾಯೋಗಿಕ ಗುರುಕುಲ ಮಾತ್ರ. ನೇಪಾಳದ ಉದ್ಯಮಿಯೊಬ್ಬರು ಪ್ರತಿ ತಿಂಗಳು 20000 ರೂ. ಧನಸಹಾಯ ಮಾಡುತ್ತಾರೆ. ಅವರ ಸದಾಶಯದಂತೆ ಈ ಗುರುಕುಲವು ನಡೆಯುತ್ತಿದೆ. ಇಲ್ಲಿ ಬಹುತೇಕ ನೇಪಾಳದ ವಿದ್ಯಾರ್ಥಿಗಳೇ ಶಾಸ್ತ್ರ ವ್ಯಾಸಂಗ ಮಾಡುತ್ತಾರೆ. ಜ್ಞಾನ ದೃಷ್ಟಿಯಿಂದಲೇ ಹೊರತು ಪರೀಕ್ಷಾ ದೃಷ್ಟಿಯಿಂದಲ್ಲ. ❑

**लसतु संस्कृतं चिरं गृहे**
**गृहे च पुनरपि ।**



**ಸಂಸ್ಕೃತವು ಚಿರಕಾಲ ಮತ್ತೆ**
**ಮನೆ ಮನೆಗಳಲ್ಲಿ ಶೋಭಿಸಲಿ.**

ಚೈತನ್ಯವನ್ನು ತುಂಬಿದರು. ಸಂಸ್ಕೃತ ಅಧ್ಯಾಪಕರು ಅಧ್ಯಯನ ಮಾಡುವುದರ ಜೊತೆಗೆ ಸಂಶೋಧನೆಯಲ್ಲೂ ತೊಡಗಬೇಕೆಂದು ಒತ್ತಿ ಹೇಳಿದರು.

ದಿನಾಂಕ 01.05.2011ರಂದು ವಾಸವಿ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರಾದ ವಿದ್ವಾನ್ ನರೇಂದ್ರರವರು ಪ್ರಥಮಾ, ಕಾವ್ಯ ತರಗತಿಗಳ ಪಾಠ್ಯಾಂಶಗಳನ್ನು ಅತ್ಯಂತ ಆತ್ಮೀಯವಾಗಿ ಮಕ್ಕಳಿಗೆ ಬೋಧಿಸಬಹುದೆಂಬುದನ್ನು ತಿಳಿಸಿದರು. ಇವರ ಬೋಧನಾಕ್ರಮ ಉತ್ಕೃಷ್ಟವಾಗಿತ್ತು.

ಈ ಮೂರು ದಿನಗಳಲ್ಲೂ ಎಲ್ಲ ಅಧ್ಯಾಪಕರಿಗೂ ಯೋಗ್ಯವಾದ ವಾಸವ್ಯವಸ್ಥೆ, ಭೋಜನದ ವ್ಯವಸ್ಥೆ, ಪ್ರಾರ್ಥನೆ, ಅಧ್ಯಾತ್ಮ ಚಿಂತನೆ, ಬೆಳಿಗ್ಗೆ ಹಾಗೂ ಸಾಯಂಕಾಲದಲ್ಲಿ ವಾಯುವಿಹಾರ ಇತ್ಯಾದಿ ವ್ಯವಸ್ಥೆಗಳನ್ನು ಶಿಬಿರದ ಸಹ ಸಂಚಾಲಕರಾದ ವಿದ್ವಾನ್ ವಿಷ್ಣು ಭಟ್‌ರವರು ಶ್ರೀ ಶ್ರೀ ರವಿಶಂಕರ ಗುರೂಜಿಯವರ ಆಶೀರ್ವಾದ ಹಾಗೂ ಸಹಕಾರದೊಂದಿಗೆ ಅಚ್ಚುಕಟ್ಟಾಗಿ ಮಾಡಿದರು.

ಶಿಬಿರದ ಸಂಚಾಲಕರಾದ ಡಾ. ಎಸ್.ಎನ್. ಪ್ರಾಣೇಶರವರು ಮೂರು ದಿನಗಳ ಕಾಲವೂ ಅಧ್ಯಾಪಕರೊಂದಿಗೆ ಆಶ್ರಮದಲ್ಲಿಯೇ ಇದ್ದು ಸಂಸ್ಕೃತ ಭಾಷೆಯಲ್ಲಿ ಎಲ್ಲರನ್ನೂ ತೊಡಗಿಸಿದ್ದರು. ಸಂಸ್ಕೃತ ಸಂಭಾಷಣೆಯ ತರಗತಿಗಳನ್ನು ನಡೆಸಿ ಯಾವಾಗಲೂ ಸಂಸ್ಕೃತದ ಮೂಲಕವೇ ಸಂಭಾಷಣೆ ಮಾಡಬೇಕೆಂದು ಪ್ರೇರಣೆ ನೀಡುತ್ತಿದ್ದರು.

ಈ ಪುನಶ್ಚೇತನ ಶಿಬಿರದ ಸಮಾರೋಪ ಕಾರ್ಯಕ್ರಮವು ದಿನಾಂಕ 01.05.2011ರಂದು ಮಧ್ಯಾಹ್ನ 4 ಗಂಟೆಗೆ ವೇದವಿಜ್ಞಾನ ವಿದ್ಯಾಪೀಠದ ವಿದ್ಯಾರ್ಥಿಗಳ ವೇದಘೋಷದೊಂದಿಗೆ ಆರಂಭವಾಯಿತು. ಸಂಸ್ಕೃತ ಅಧ್ಯಾಪಕರಾದ ಶ್ರೀ ವಿಜಯ ರಾಘವನ್ ಪ್ರಾರ್ಥನೆಯನ್ನು ನೆರವೇರಿಸಿದರು. ಕೆಲವು ಸಂಸ್ಕೃತ ಅಧ್ಯಾಪಕರು ತಮ್ಮ ಮೂರು ದಿನಗಳ ಅನುಭವಗಳನ್ನು ಹೇಳಿ ಸಂತೋಷಪಟ್ಟರು.

ಸಮಾರೋಪ ಭಾಷಣದಲ್ಲಿ ಚನ್ನೇನಹಳ್ಳಿ ವೇದವಿಜ್ಞಾನ ಗುರುಕುಲದ ಸಂಸ್ಥಾಪಕರು ಹಾಗೂ ಪ್ರಥಮ ಪ್ರಾಚಾರ್ಯರಾದ ಡಾ. ಕೋಟೆಮನೆ ರಾಮಚಂದ್ರ ಭಟ್ಟರು ಸಂಸ್ಕೃತ ವಿದ್ವಾಂಸರು ಹಾಗೂ ಅಧ್ಯಾಪಕರು ತಮ್ಮ ನೈಚ್ಯಾನುಸಂಧಾನವನ್ನು ಬಿಡಬೇಕು, ಉತ್ತಮ ಜ್ಞಾನವನ್ನು ಸಂಪಾದಿಸಿ ಸಜ್ಜನಿಕೆಯನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು. ಈಗ ಜಗತ್ತಿನಲ್ಲಿ ಸಂಸ್ಕೃತ, ಆಯುರ್ವೇದ, ಯೋಗ, ಅಧ್ಯಾತ್ಮ –ಈ ನಾಲ್ಕು ವಿದ್ಯೆಗಳು ಚಾಲ್ತಿಯಲ್ಲಿವೆ. ಬೇರೆ ಎಲ್ಲ ವಿದ್ಯೆಗಳು ತಮ್ಮ ಬೆಲೆ ಕಳೆದುಕೊಳ್ಳುತ್ತಿವೆ ಎಂಬ ಅಂಶವನ್ನು ಅನೇಕ ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿದರು. ಶ್ರೀಯುತರು ಎಲ್ಲ ಅಧ್ಯಾಪಕರಿಗೂ ಪ್ರಮಾಣಪತ್ರಗಳನ್ನು ವಿತರಿಸಿ ಆಶೀರ್ವದಿಸಿದರು.

ಅನಂತರ ಸನ್ಮಾನ್ಯ ಕುಲಪತಿಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ ಬಾಲ್ಯದಲ್ಲಿ ತಾವು ಕಷ್ಟಪಟ್ಟು ಸಂಸ್ಕೃತ ಅಧ್ಯಯನದಲ್ಲಿ ತೊಡಗಿದ್ದನ್ನು ಹಾಗೂ ಆಸಕ್ತಿಯಿಂದ ಅಭ್ಯಾಸ ಮಾಡಿದ್ದನ್ನು ಉಲ್ಲೇಖಿಸಿದರು. ಸಂಸ್ಕೃತಾಧ್ಯಾಪಕರು ತಮ್ಮ ವೃತ್ತಿಯನ್ನು ಪ್ರೀತಿಸಬೇಕು. ಆಗಲೇ ಆಂತರಿಕ ವಿಕಾಸ ಹಾಗೂ ವಿದ್ಯಾರ್ಥಿಗಳ ಕಲ್ಯಾಣ ಎಂದು ಅಭಿಪ್ರಾಯಪಟ್ಟರು. ಶ್ರೀಯುತರ ಮಾತಿನಲ್ಲಿ ಅವರಿಗೆ ಸಂಸ್ಕೃತ ಭಾಷೆಯ ಬಗೆಗೆ ಇರುವ ಗೌರವ, ಕಳಕಳಿ, ಸಂಸ್ಕೃತವು ಬೆಳೆದು ಸಮಗ್ರ ದೇಶದ ಅಭಿವೃದ್ಧಿಯಾಗಬೇಕೆಂಬ ಭಾವನೆ ಸ್ಪಷ್ಟವಾಗಿ ವ್ಯಕ್ತವಾಗುತ್ತಿದ್ದವು.

ಒಟ್ಟಿನಲ್ಲಿ ಮೂರು ದಿವಸಗಳ ಶಿಬಿರದ ಸಾರ್ಥಕತೆಯು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಡಾ. ಶ್ರೀನಿವಾಸ ವರಖೇಡಿ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು. ●

**ಹುಬ್ಬಳ್ಳಿಯ ನವನಗರದ ಶ್ರೀ ಕಾಶೀ ಖಾಸಾ ಶಾಖಾಮಠ ಶ್ರೀ ಜಗದ್ಗುರು ಪಂಚಾಚಾರ್ಯ ಶಿವಯೋಗ ಪುಣ್ಯಾಶ್ರಮದಲ್ಲಿ ಪಂಚಾಚಾರ್ಯ ವೇದ–ಆಗಮ–ಜ್ಯೋತಿಷ್ಯ–ಸಂಸ್ಕೃತ ಪಾಠಶಾಲೆಯ ಉದ್ಘಾಟನೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಚಂದ್ರಮೌಳಿ ಎಸ್. ನಾಯ್ಕರ ಅವರು ನೆರವೇರಿಸಿದರು.**



ಭಾಷೆಯ ಗ್ರಂಥಗಳನ್ನು ಓದದೇ ಇಂಗ್ಲಿಷ್ ಭಾಷಾಗ್ರಂಥಗಳ ಅಧ್ಯಯನದಿಂದ ಪ್ರೌಢತೆ ಹೆಚ್ಚುತ್ತದೆ ಎಂದರು. ಸಮಾಜವು ಶಿಕ್ಷಕರನ್ನು ಗೌರವದಿಂದ ಕಾಣುತ್ತದೆ. ಅದಕ್ಕೆ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು. ಸಂಸ್ಕೃತವನ್ನು ಸಂರಕ್ಷಣೆ ಮಾಡುವ ಹೊಣೆ ಶಿಕ್ಷಕರ ಮೇಲಿದೆ ಎಂದರು.

ಅತಿಥಿಗಳಾಗಿ ಶ್ರೀ ಶಿವಯೋಗೀಶ್ವರ ಸಾಧು ಸಂಸ್ಥಾನ ಮಠದ ಚೇರ್‌ಮನ್ ಡಿ.ಬಿ. ಮಲ್ಲೂರ ಮಾತನಾಡಿ, ಸಂಸ್ಕೃತ ಭಾಷೆಯ ಬೆಳವಣಿಗೆಗೆ ಶಿಬಿರ ಅಗತ್ಯವಾದದ್ದು ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಮಾತನಾಡಿ, ತೆಲುಗು, ಕನ್ನಡದ ಬೆಳವಣಿಗೆಗೆ ಸಂಸ್ಕೃತ ಭಾಷೆ ಸಹಕಾರಿ. ಸಂಸ್ಕೃತಕ್ಕೆ ಭವ್ಯವಾದ ಚರಿತ್ರೆ ಇದೆ. ಕನ್ನಡದಲ್ಲಿ ಶೇ. 80ರಷ್ಟು ಸಂಸ್ಕೃತ ಪದಗಳಿವೆ ಎಂದರು.

ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಡಾ. ವೇಣಿಮಾಧವಶಾಸ್ತ್ರೀ, ವಿದ್ವಾನ್ ಸೂರ್ಯನಾರಾಯಣ ಭಟ್ ಅವರಿಗೆ ವಿಭಾಗೀಯ ಸಂಸ್ಕೃತ ಶಿಕ್ಷಕರ ಸಂಘದಿಂದ ಸನ್ಮಾನಿಸಲಾಯಿತು.

ಮಲ್ಲಿಕಾರ್ಜುನ ಹಿರೇಮಠ ವೇದಘೋಷ ಮಾಡಿದರು. ಗೀತಾ ಬಂಕಾಪೂರ, ಸುನಂದಾ ರಾಸನಕರ ಸಂಸ್ಕೃತ ಗೀತೆ ಹಾಡಿದರು. ಸೂರ್ಯನಾರಾಯಣ ಭಟ್ ಸ್ವಾಗತಿಸಿದರು. ಡಾ. ಲಕ್ಷ್ಮೀಕಾಂತ ಮೊಹರೀರ ಪರಿಚಯಿಸಿದರು.

ಎಂ.ಎಂ. ಹೊಸಮನಿ, ಗಣಪತಿ ಭಟ್, ಶ್ರೀಮತಿ ಎನ್.ವಿ. ತಿಪ್ಪಾ ಶಿಬಿರದ ಅನಿಸಿಕೆ ಹೇಳಿದರು.

ಸಂಯೋಜಕ ಎಸ್.ಡಿ. ಕರಾಡೆ, ಎಸ್.ಜಿ. ನಿಡಗುಂದಿ, ವಿಶ್ವವಿದ್ಯಾಲಯದ ಮಂಜುನಾಥ ಉಪಸ್ಥಿತರಿದ್ದರು. ಶಿಕ್ಷಕರಾದ ಎಂ.ಎಂ. ಹೊಸಮನಿ ವಂದಿಸಿದರು.

# ಸಂಸ್ಕೃತ ಸಂಭಾಷಣ ಶಿಬಿರದ ಸಮಾರೋಪ

ಸಂಸ್ಕೃತ ಕಲಿಕೆಯಿಂದ ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ ಮೂಡುತ್ತದೆ. ಸಂಸ್ಕಾರವಿದ್ದಾಗ ಬದುಕು ಉತ್ತಮವಾಗುತ್ತದೆ ಎಂದು ಕೊಟೆಕಲ್ ಶಾರದಾ ವಿದ್ಯಾಲಯದ ನಿರ್ದೇಶಕ ಸೋಮಶೇಖರ ಬಂಕಾಪೂರ ಹೇಳಿದರು.

ಅವರು ಗುಳೇದಗುಡ್ಡ ನಗರದ ಜಗದ್ಗುರು ಗುರುಸಿದ್ದೇಶ್ವರ ಸಂಸ್ಕೃತ ಪಾಠ ಶಾಲೆಯಲ್ಲಿ ಹಮ್ಮಿಕೊಂಡ ಹತ್ತು ದಿನಗಳ ಸಂಸ್ಕೃತ ಸಂಭಾಷಣ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ವಿದ್ವಾನ್ ಸರ್ವತ್ರ ಪೂಜ್ಯತೇ ಎನ್ನುವಂತೆ ದೇವ ಭಾಷೆಯಾದ ಸಂಸ್ಕೃತ ಕಲಿತರೆ ಅವರು ಎಲ್ಲೆಡೆಯು ಪೂಜನೀಯರಾಗುತ್ತಾರೆ. ಸಂಸ್ಕೃತ ಎಲ್ಲರ ಆಡು ಭಾಷೆಯಾಗಬೇಕು ಎಂದು ಸೋಮಶೇಖರ ಬಂಕಾಪೂರ ಹೇಳಿದರು.



ಗುಳೇದಗುಡ್ಡದ ಶ್ರೀ ಜಗದ್ಗುರು ಗುರುಸಿದ್ದೇಶ್ವರ ಸಂಸ್ಕೃತ ಪಾಠಶಾಲೆಯಲ್ಲಿ 10 ದಿನಗಳ ಸಂಸ್ಕೃತ ಸಂಭಾಷಣ ಶಿಬಿರದಲ್ಲಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ.

ಗುರುಸಿದ್ದೇಶ್ವರ ಬ್ರಹನ್ಮಮಠದ ಗುರುಬಸವ ದೇವರು ಸಾನಿಧ್ಯ ವಹಿಸಿ ಆರ್ಶಿವಚನ ನೀಡಿದರು. ಬಸವರಾಜ ಯಂಡಿಗೇರಿ ಅಧ್ಯಕ್ಷತೆ ವಹಿಸಿದ್ದರು.

ಕೋಟೆಕಲ್ ಶಾರದಾ ಸಂಸ್ಕೃತ ಪಾಠಶಾಲೆಯ ಮುಖ್ಯ ಗುರುಮಾತೆ ನಾಗವೇಣಿ ತಿಪ್ಪಾ, ಶಿಕ್ಷಕಿ ಸುನಂದಾ ರಾಸನಕರ, ಗೀತಾ ಬಂಕಾಪುರ, ಲಕ್ಷ್ಮೀ ಕಟಗೇರಿ, ಮಾಲಾ ತಾಂಡೂರ ಮತ್ತು ಮಲ್ಲಿಕಾರ್ಜುನ ರಾಜನಾಳ ಉಪಸ್ಥಿತರಿದ್ದರು.

ಲೇಖನ ದೋಷಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ಸಮಾಧಾನ ಪಡೆದುಕೊಂಡರು.

ಭೋಜನಾನಂತರ ಶಿಬಿರಾರ್ಥಿಗಳ ಪ್ರತಿಭಾ ಪ್ರದರ್ಶನದೊಂದಿಗೆ ಅಂದಿನ ಕಾರ್ಯಕ್ರಮಗಳು ಸಂಪನ್ನಗೊಂಡವು.

19.05.2011ರಂದು ಬೆಳಿಗ್ಗೆ ಶ್ರೀ ಫಾಲನೇತ್ರಯ್ಯ ಅವರ ನೇತೃತ್ವದಲ್ಲಿ ಪ್ರಾರ್ಥನೆ ಹಾಗೂ ಯೋಗಾಭ್ಯಾಸವು ನಡೆಯಿತು. ಉಪಾಹಾರಾನಂತರ 9 ಗಂಟೆಗೆ ಶ್ರೀಮತಿ ಸಾವಿತ್ರೀ ಪೂಜಾರ್ ಅವರು ಸಂಸ್ಕೃತ ಸಂಭಾಷಣ ಅಭ್ಯಾಸವನ್ನು ನಡೆಸಿದರು. ಆ ನಂತರ ಎರಡು ಅವಧಿಗಳ ಕಾಲ ವಿದುಷೀ ವಿಜಯಲಕ್ಷ್ಮೀ ಅವರು 'ವ್ಯಾಕರಣ ಹಾಗೂ ವ್ಯಾಕರಣಬೋಧನಾಕ್ರಮ'ದ ಬಗ್ಗೆ ತಿಳಿಸಿದರು.

**ಸಮಾರೋಪ:** ಅಂದು ಅಪರಾಹ್ನ 3 ಗಂಟೆಗೆ ಈ ಪುನಶ್ಚೇತನ ಶಿಬಿರದ ಸಮಾರೋಪ ಸಮಾರಂಭ ನಡೆಯಿತು. ಇದರ ದಿವ್ಯ ಸಾನ್ನಿಧ್ಯವನ್ನು ಆದಿಚುಂಚನಗಿರಿ ಮಹಾಸಂಸ್ಥಾನಾಧೀಶ್ವರರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ವಹಿಸಿದ್ದರು. ಅಧ್ಯಕ್ಷತೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ವಹಿಸಿದ್ದರು. ಸಮಾರೋಪ ಭಾಷಣಕಾರರಾಗಿ ಪೂರ್ಣಪ್ರಜ್ಞ ಸಂಶೋಧನ ಮಂದಿರದ ನಿರ್ದೇಶಕರಾದ ಡಾ. ಎ.ವಿ. ನಾಗಸಂಪಿಗೆ ಅವರು ಭಾಗವಹಿಸಿದ್ದರು. ಶ್ರೀ ನಂಜುಂಡಯ್ಯ, ಶ್ರೀ ಗಂಗಣ್ಣ, ಶ್ರೀ ಚಂದ್ರಶೇಖರಯ್ಯನವರು ಉಪಸ್ಥಿತರಿದ್ದರು.

ಮೂರು ದಿನಗಳ ಕಾಲ ನಡೆದ ಈ ಶಿಬಿರ ಎಲ್ಲಾ ಶಿಕ್ಷಕರಿಗೂ ಬಹಳ ಉಪಕಾರಿಯಾಯಿತು.

# ಮಕ್ಕಳನ್ನು ಸುಸಂಸ್ಕೃತರನ್ನಾಗಿಸಿ



**ಲಕ್ಷ್ಮೇಶ್ವರದ ತಾ.ಪಾ.ಮ. ಬಳಗದ ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆಯ ಸಂಸ್ಕೃತ ವಾರ್ಷಿಕೋತ್ಸವದಲ್ಲಿ ಗಂಜೀಗಟ್ಟಿಯ ಮಹಾಸ್ವಾಮಿಗಳು ಮಾತನಾಡಿದರು. ಜಯಲಕ್ಷ್ಮೀ ಗಡ್ಡದೇವರಮಠ, ಪ್ರಭುಸ್ವಾಮಿ ಆರಾಧ್ಯಮಠ ಉಪಸ್ಥಿತರಿದ್ದರು.**

ವಿದ್ಯಾರ್ಥಿಜೀವನವು ಪವಿತ್ರವಾದದ್ದು. ಉತ್ತಮ ಸಂಸ್ಕೃತಿಯಲ್ಲಿ ಬೆಳೆಸಿದರೆ ಸಮಾಜದ ಸುಸಂಸ್ಕೃತ ವ್ಯಕ್ತಿಗಳಾಗುತ್ತಾರೆ ಎಂದು ಗಂಜೀಗಟ್ಟಿಯ ಶಿವಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ಇವರು ಲಕ್ಷ್ಮೇಶ್ವರ ನಗರದ ತಾ.ಪಾ.ಮ. ಬಳಗದ ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆಯ ವಾರ್ಷಿಕೋತ್ಸವದ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು. ಸುಸಂಸ್ಕೃತ ಮಕ್ಕಳೇ ಈ ಸಮಾಜದ ಆಸ್ತಿಯಾಗುತ್ತಾರೆ. ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳೆಸುವಲ್ಲಿ ತಂದೆ ತಾಯಿಯರ ಪಾತ್ರ ಮಹತ್ವದ್ದಾಗಿರುತ್ತದೆ ಎಂದು ಹೇಳಿದರು.

ಮಕ್ಕಳು ದೂರದರ್ಶನ ವೀಕ್ಷಿಸುತ್ತಾ ಅದರಲ್ಲಿ ಬರುವ ಅನೇಕ ಪಾತ್ರಗಳನ್ನು ಮನಸ್ಸಿನ ಮೇಲೆ ತೆಗೆದುಕೊಂಡು ಅದರಂತಾಗಬೇಕೆಂದು ಕೆಟ್ಟ ದಾರಿ ಹಿಡಿಯುವುದನ್ನು ನಾವು ಕಾಣುತ್ತಿದ್ದೇವೆ. ಅದರಲ್ಲೂ ಮೊಬೈಲ್ ಬಳಕೆ ಒಂದು ರೀತಿಯಲ್ಲಿ ಮಾದಕದ್ರವ್ಯದಂತೆ ಮಕ್ಕಳ ವ್ಯಕ್ತಿತ್ವದ ಮೇಲೆ ದುಷ್ಪರಿಣಾಮವನ್ನು ಬೀರುತ್ತಿದೆ. ಆದ್ದರಿಂದ ವಿದ್ಯಾರ್ಥಿಗಳು ಅವುಗಳನ್ನು ಅವಶ್ಯಕತೆಗಳಿಗಿಂತ ಅತಿಯಾಗಿ ಬಳಸುವುದನ್ನು ನಿಲ್ಲಿಸಬೇಕು ಎಂದು ಹೇಳಿದರು.

ಹತ್ತಿಮತ್ತೂರ ಸಂಸ್ಕೃತ ಪಾಠಶಾಲೆಯ ಶಿಕ್ಷಕ ಪ್ರಭುಸ್ವಾಮಿ ಆರಾಧ್ಯಮಠ ಮಾತನಾಡಿ ಮಕ್ಕಳಲ್ಲಿ ವಿಧೇಯತೆ, ನಿಷ್ಠೆ, ಪ್ರಾಮಾಣಿಕತೆ ಇರಬೇಕು. ಅಂದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದರು.

ಜಯಲಕ್ಷ್ಮೀ ಗಡ್ಡದೇವರಮಠ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಪಾಠಶಾಲೆಗೆ ದಾನ ನೀಡಿದ ಡಿ.ಪಿ. ಹೇಮಾದ್ರಿ ದಂಪತಿಗಳು, ಕಬನೂರ ದಂಪತಿಗಳನ್ನು ಸನ್ಮಾನಿಸಲಾಯಿತು. ಪಾಠಶಾಲೆಯ ಮುಖ್ಯೋಪಾಧ್ಯಾಯ ಬಿ.ಎಚ್. ಸಂಗೂರಮಠ ಸ್ವಾಗತಿಸಿದರು. ಜಯಶ್ರೀ ಮೆಳ್ಳಿಗೇರಿ ಕಾರ್ಯಕ್ರಮ ನಿರೂಪಿಸಿದರು. ರಶ್ಮಿ ಮೇಟಿ ವಂದಿಸಿದರು.

❑

ಜೀಯಾತ್ ಗೀರ್ವಾಣಭಾರತೀ.

**ಡಾ. ಕೃಷ್ಣಮೂರ್ತಿ ಜಿ. ಕೂರ್ಸೆ**
ಪ್ರಾಧ್ಯಾಪಕ, ಶ್ರೀ ಆದಿಚುಂಚನಗಿರಿ ಕ್ಷೇತ್ರ

ಸಂಸ್ಕೃತ ಮೃತ ಭಾಷೆ ಎಂಬ ಅಪಖ್ಯಾತಿಗೆ ಒಳಗಾಗಿ ಮೃತವಲ್ಲವೆಂದು ತಿಳಿದಿದ್ದರೂ ಸಾಯಿಸುವ ಪ್ರಯತ್ನದಲ್ಲಿದ್ದವರಿಗೆಲ್ಲರಿಗೂ ತಕ್ಕ ಉತ್ತರ ರೂಪವಾಗಿ ಸಂಸ್ಕೃತ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದಿದ್ದು ಸಂತಸದ ವಿಷಯ.

ಆಧುನಿಕ ಯುಗದಲ್ಲಿ ಮಾಧ್ಯಮಗಳ ಪ್ರಭಾವವನ್ನು ವರ್ಣಿಸುವುದು ಅಸಾಧ್ಯ. ಹೀಗಿರುವಾಗ 'ವಾರ್ತಾಪತ್ರ' ರೂಪವಾದ ಮಾಧ್ಯಮವು ಹೊರಡುತ್ತಿರುವುದೂ ಸಮಂಜಸವಾಗಿದೆ. ಇವೆರಡೂ ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಲಿ ಎಂದು ಈ ಮೂಲಕ ಆಶಿಸುತ್ತೇನೆ.

**–ಶ್ರೀ ಬಿ.ಎಸ್. ಶ್ರೀನಿವಾಸಾಚಾರ್ಯ**
ಸಹ ಶಿಕ್ಷಕ, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಮಹಾವಿದ್ಯಾಲಯ

'ಸಂಸ್ಕೃತಂ ನಾಮ ದೈವೀ ವಾಕ್ ಅನ್ವಾಖ್ಯಾತಾ ಮಹರ್ಷಿಭಿಃ' ಎಂಬುದಾಗಿ ಸಂಸ್ಕೃತ ಭಾಷೆಯು ದೇವವಾಣಿ ಎಂದು ಮಹರ್ಷಿಗಳೇ ಹೊಗಳಿದ್ದಾರೆ. ಆದ್ದರಿಂದ ಈ ಸಂಸ್ಕೃತ ಭಾಷೆಯು ಮಹತ್ತ್ವವನ್ನು ತಿಳಿಸುವ 'ವಾರ್ತಾಪತ್ರಮ್' ಎನ್ನುವ ಪತ್ರಿಕೆಯು ಸಂಸ್ಕೃತ ವಿಶ್ವವಿದ್ಯಾಲಯದಿಂದ ಇತ್ತೀಚೆಗೆ ಬಿಡುಗಡೆ ಆಗಿದೆ. ಇದರಿಂದ ಈಗಾಗಲೇ ಅದೆಷ್ಟೋ ಜನರು ಉಪಯೋಗ ಪಡೆದುಕೊಂಡಿದ್ದಾರೆ. ಈ ಪತ್ರಿಕೆಯ ಮುಖಾಂತರ ಜನರಿಗೆ ಸಂಸ್ಕೃತ ಭಾಷೆಯಲ್ಲಿ ಇನ್ನಷ್ಟು ಆಸಕ್ತಿ ಹುಟ್ಟಲಿ ಎಂದು ಆಶಿಸುತ್ತೇನೆ.

**–ಶ್ರೀ ಭೈರವನಾಥ ಸ್ವಾಮಿಗಳು**
ಶ್ರೀ ಆದಿಚುಂಚನಗಿರಿಮಠ

ಸಂಸ್ಕೃತ ಭಾಷಾ ಮಾಧ್ಯಮದಲ್ಲಿ ಭಾರತೀಯ ಪ್ರಾಚೀನಶಾಸ್ತ್ರ ಗ್ರಂಥಗಳು, ಪುರಾಣ–ಇತಿಹಾಸ ಗ್ರಂಥಗಳು –ಇವೆಲ್ಲದಕ್ಕೂ ಆಧಾರವಾಗಿ ವೇದಗಳೂ ಇವೆ. ಇವೆಲ್ಲದರ ಅಧ್ಯಯನಕ್ಕೆ ಅನುಕೂಲವಾಗಲೆಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರಾರಂಭವಾಗಿದೆ. ಭಾರತೀಯರಾದ ನಾವೆಲ್ಲರೂ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಯೋಜನವನ್ನು ಪಡೆಯುವುದು ಸೂಕ್ತ. ಸಂಸ್ಕೃತ ವಿಶ್ವವಿದ್ಯಾಲಯದ ಉದ್ದೇಶ ಹಾಗೂ ಚಟುವಟಿಕೆಗಳನ್ನು ಜನಸಾಮಾನ್ಯರಿಗೆ ತಿಳಿಸಲು ವಾರ್ತಾ ಮಾಧ್ಯಮ ಒಂದು ಬೇಕಾಗುತ್ತದೆ. ಆ ಕೆಲಸವನ್ನು 'ವಾರ್ತಾಪತ್ರ'ವು ಮಾಡುತ್ತಿದೆ. ಈಗ ಈ 'ವಾರ್ತಾಪತ್ರಮ್' ತ್ರೈಮಾಸಿಕವಾಗಿದೆ. ಈ ತ್ರೈಮಾಸಿಕ ಪತ್ರಿಕೆಯು ಮಾಸಿಕವಾಗಿ ಅಥವಾ ವಾರಪತ್ರಿಕೆಯಾಗಿ ಹೆಚ್ಚು ಹೆಚ್ಚು ಪ್ರಸಾರವಾಗುತ್ತ ಕರ್ನಾಟಕದ ಹಾಗೂ ದೇಶ–ವಿದೇಶದ ಎಲ್ಲಾ ಜನರನ್ನು ತಲುಪಲಿ. ಈ ಮೂಲಕ ಜಾತಿಮತ ಲಿಂಗಭೇದವಿಲ್ಲದೇ ಎಲ್ಲರೂ ಸಂಸ್ಕೃತ ಗ್ರಂಥಗಳ ಅಧ್ಯಯನಶೀಲರಾಗುವಂತೆ ಪ್ರಚೋದಿಸಲೆಂದು ಆಶಿಸುತ್ತೇನೆ.

**–ಎಚ್.ಎಂ. ನರಸಿಂಹಮೂರ್ತಿ**
ಪ್ರಾಧ್ಯಾಪಕ, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಮಹಾವಿದ್ಯಾಲಯ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವತಿಯಿಂದ ಹೊರಬರುತ್ತಿರುವ ವಾರ್ತಾಪತ್ರದಲ್ಲಿ ವಿದ್ವಾನ್ ಎನ್.ಟಿ. ಶ್ರೀನಿವಾಸ ಅಯ್ಯಂಗಾರ್‌ರವರ ಸಂದರ್ಶನವು ಬಹಳ ಚೆನ್ನಾಗಿ ಮೂಡಿಬಂದಿದೆ. ಅವರ ಭಾವನೆಗಳು ಅದ್ಭುತವಾಗಿದೆ. ಇದೇ ರೀತಿ ವಿದ್ವಾಂಸರ ಸಂದರ್ಶನವನ್ನು ಸರಣಿ ರೂಪದಲ್ಲಿ ನೀಡಿದರೆ ಅವೆಲ್ಲವನ್ನು ಸಂರಕ್ಷಣೆ ಮಾಡಲು ಯೋಗ್ಯವಾಗಿರುತ್ತದೆ ಎಂದು ನನ್ನ ಭಾವನೆ. ಸ್ಫೂರ್ತಿದಾಯಕ ವಿಷಯಗಳನ್ನೊಳಗೊಂಡ ಈ ವಾರ್ತಾಪತ್ರ ಎಲ್ಲಾ ಸಂಸ್ಕೃತ ಅಭಿಮಾನಿಗಳಿಗೂ ತಲುಪಿದರೆ ವಿಶ್ವವಿದ್ಯಾಲಯದ ಶ್ರಮ ಸಾರ್ಥಕವೆನಿಸುತ್ತದೆ.

**–ಶ್ರೀ ಟಿ.ಸಿ. ಅಶ್ವತ್ಥಕುಮಾರ್**
ಸಂಸ್ಕೃತ ಶಿಕ್ಷಕ

ವರ್ಣರಂಜಿತ ಮುಖಪುಟವನ್ನು ಹೊಂದಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆಯು ಬಹಳ ಸೊಗಸಾಗಿ ಮೂಡಿಬಂದಿದೆ. ಕರ್ನಾಟಕದ ಪ್ರಸಿದ್ಧ ತ್ರಿವಿಧ ದಾಸೋಹ ಕೇಂದ್ರವಾದ ಶ್ರೀ ಸಿದ್ಧಗಂಗಾ ಕ್ಷೇತ್ರದ ಸಂಸ್ಕೃತ ಸೇವೆಯ ಪರಿಚಯ ಶ್ರೀ ಸಿದ್ಧಗಂಗಾ ಕ್ಷೇತ್ರದ ಮೇಲಿನ ಅಭಿಮಾನವನ್ನು ಇಮ್ಮಡಿಗೊಳಿಸಿದೆ. ಬಹಳ ಯಶಸ್ವಿಯಾದ ವಿಶ್ವಸಂಸ್ಕೃತ ಪುಸ್ತಕ ಮೇಳದ ಮಾಹಿತಿಯ ಜೊತೆಗೆ ಇತರೆ ಸಂಸ್ಕೃತ ಕಾರ್ಯಚಟುವಟಿಕೆಗಳಿಗೆ ಸಂಬಂಧಪಟ್ಟ ವಾರ್ತೆಗಳು ಪ್ರಚಾರವಿಲ್ಲದೇ ಬಡವಾದ ಸಂಸ್ಕೃತ ಕಾರ್ಯಚಟುವಟಿಕೆಗಳಿಗೆ ಮತ್ತಷ್ಟು ಉತ್ಸಾಹ ತುಂಬಿದೆ.

**–ಪವನ**
ವಿದ್ಯಾರ್ಥಿ

ಸಂಸ್ಕೃತ ವಿದ್ವಾಂಸರ ಸಂದರ್ಶನ ಚೆನ್ನಾಗಿ ಮೂಡಿಬರುತ್ತಿದೆ. ಅನೇಕ ಸುದ್ದಿಯ ಜೊತೆಗೆ ಪುಟಕ್ಕೊಂದು ಸುಭಾಷಿತವನ್ನು ಸೇರಿಸಿದರೆ ಪತ್ರಿಕೆಯ ಅಂದ ಮತ್ತಷ್ಟು ಹೆಚ್ಚೀತು.

**–ಮನೋಹರ**
ಸಂಸ್ಕೃತಾಭಿಮಾನಿ

ವಹಿಸಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ನೀಡಿದರು.

- ಇಂಡಿಯನ್ ಕಲ್ಚರಲ್ ಅಕಾಡೆಮಿ ಟ್ರಸ್ಟ್ ದಿನಾಂಕ ೦೩.೦೫.೨೦೧೧ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ **'ಗಾನ-ಸವ್ಮಾನ-ಸಂಭ್ರಮ'** ಕಾರ್ಯಕ್ರಮವನ್ನು ಆಯೋಜಿಸಿತ್ತು. ಮಾನ್ಯ ಕುಲಪತಿಗಳು ಕಾರ್ಯಕ್ರಮವನ್ನು ಶುಭಾರಂಭಗೊಳಿಸಿದರು. ಶ್ರೀ ರವಿ ಬೆಳಗೆರೆ ಮತ್ತು ಶ್ರೀ ಟಿ.ಎನ್. ಸೀತಾರಾಂ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

- ಕಾಂತಾವರದ ಅಲ್ಲಮಪ್ರಭು ಪೀಠದ ಕಟ್ಟಡ ಸಮುಚ್ಚಯಗಳ ಶಂಕುಸ್ಥಾಪನಾ ಸಮಾರಂಭವು ದಿನಾಂಕ ೦೬.೦೫.೨೦೧೧ರಂದು ಕಾಂತಾವರದಲ್ಲಿ ನಡೆಯಿತು. ಸಮಾರಂಭದಲ್ಲಿ ಮಾನ್ಯ ಕುಲಪತಿಗಳು **ಆಶಯ ಭಾಷಣ**ವನ್ನು ನೆರವೇರಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಸಂಸತ್ ಸದಸ್ಯರಾದ ಶ್ರೀ ಡಿ.ವಿ. ಸದಾನಂದಗೌಡರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗಣೇಶ್ ಕಾರ್ಣಿಕ್ ಅವರು ಭಾಗವಹಿಸಿದ್ದರು.

- ನಾರಾಯಣ ಸಂಸ್ಕೃತಿ ಕೇಂದ್ರ ಮತ್ತು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ದಿನಾಂಕ ೦೭.೦೫.೨೦೧೧ರಂದು 'ಹರಿದಾಸರು ಕಂಡ ರಾಮಾನುಜ ದರ್ಶನ' **ಪುಸ್ತಕ ಬಿಡುಗಡೆ ಸಮಾರಂಭ**ವನ್ನು ಆಯೋಜಿಸಿತ್ತು. ಈ ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಪುಸ್ತಕವನ್ನು ಲೋಕಾರ್ಪಣೆ ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ. ಡಿ. ಲಿಂಗಯ್ಯ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಸಾಹಿತಿ ಪ್ರೊ. ಜಿ. ಅಶ್ವತ್ಥನಾರಾಯಣ ಭಾಗವಹಿಸಿದ್ದರು.

- ಬೆಂಗಳೂರಿನ ರಂಗಚೇತನ ಕಲಾವಿದರು ಮತ್ತು ಸಾ-ಮುದ್ರ ಫೌಂಡೇಷನ್‌ನವರು ದಿನಾಂಕ ೦೯.೦೫.೨೦೧೧ರಂದು ಡಾ. ಡಿ.ಕೆ. ಚೌಟ ಮತ್ತು ಡಾ. ಅಜಯ್ ಕುಮಾರ್ ಸಿಂಗ್ ಅವರಿಗೆ **ಅಭಿನಂದನಾ ಸಮಾರಂಭ**ವನ್ನು ಏರ್ಪಡಿಸಿದ್ದರು. ಆ ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಡಾ. ಡಿ.ಕೆ. ಚೌಟ ಮತ್ತು ಡಾ. ಅಜಯ್ ಕುಮಾರ್ ಸಿಂಗ್ ಅವರನ್ನು ಅಭಿನಂದಿಸಿ ಅಭಿನಂದನಾ ಭಾಷಣ ಮಾಡಿದರು.

- ಸವದತ್ತಿ ತಾಲ್ಲೂಕಿನ ಇಂಚಲದಲ್ಲಿ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ಆಯೋಜಿಸಿದ್ದ **'ಪುನಶ್ಚೇತನ ಶಿಬಿರ'**ದ ಸಮಾರೋಪ ಸಮಾರಂಭವು ದಿನಾಂಕ ೧೦.೦೫.೨೦೧೧ರಂದು ನಡೆಯಿತು. ಪ್ರೊ. ವೇಣಿಮಾಧವಶಾಸ್ತ್ರೀ ಅವರು ಸಮಾರೋಪ ಭಾಷಣವನ್ನು ಮಾಡಿದರು. ಮಾನ್ಯ ಕುಲಪತಿಗಳು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು. ಪೂಜ್ಯ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು.

- ಕರ್ನಾಟಕ ಜಲಮಂಡಳಿಯಲ್ಲಿ ದಿನಾಂಕ ೧೭.೦೫.೨೦೧೧ರಂದು ನಡೆದ **ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿ** ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಮುಖ್ಯ ಅತಿಥಿಯಾಗಿ ಭಾಗವಹಿಸಿ ಪ್ರಧಾನ ಭಾಷಣವನ್ನು ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಲಮಂಡಳಿಯ ಅಧ್ಯಕ್ಷರಾದ ಶ್ರೀ ಪಿ.ಬಿ. ರಾಮಮೂರ್ತಿ ವಹಿಸಿದ್ದರು.

- ದಿನಾಂಕ ೨೬.೦೫.೨೦೧೧ರಂದು ರಾಜಭವನದಲ್ಲಿ ನಡೆದ **'ಕುವೆಂಪು: ಒಂದು ಸಂವಾದ'** ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿದ್ದರು. ಘನತೆವೆತ್ತ ರಾಜ್ಯಪಾಲರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ದಿನಾಂಕ ೨೬.೦೫.೨೦೧೧ರಂದು ಸಂಜೆ ೪.೩೦ಕ್ಕೆ ನಡೆದ **'ಮುದನೂರು ಮತ್ತು ದೇವರ ದಾಸಿಮಯ್ಯ'** ವಿಚಾರ ಸಂಕಿರಣದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು.

- ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ದಿನಾಂಕ ೩೧.೦೫.೨೦೧೧ ರಂದು ನಡೆದ **ಪುಸ್ತಕ ಬಿಡುಗಡೆ ಸಮಾರಂಭ**ದಲ್ಲಿ ಭಾಗವಹಿಸಿ ಡಾ. ಕೆ.ಎನ್. ಲೋಲಾಕ್ಷಿ ಅವರ ವಿಮರ್ಶಾ ಸಂಪುಟ ಮತ್ತು ಕವನ ಸಂಗ್ರಹಗಳ ಪುಸ್ತಕಗಳನ್ನು ಮಾನ್ಯ ಕುಲಪತಿಗಳು ಲೋಕಾರ್ಪಣ ಮಾಡಿದರು. ಸಮಾರಂಭದಲ್ಲಿ ಅಧ್ಯಯನ ಸಂಸ್ಥೆಯ ನಿರ್ದೇಶಕರು ಹಾಗೂ ವಿಶ್ರಾಂತ ಪ್ರಾಧ್ಯಾಪಕರು ಭಾಗವಹಿಸಿದ್ದರು.

**ಜೂನ್**

- ದಿನಾಂಕ ೧೨.೦೬.೨೦೧೧ರಂದು ಮುಂಬಯಿಯಲ್ಲಿ ನಡೆದ **ಮಹಾರಾಷ್ಟ್ರ ರಾಜ್ಯ ಕನ್ನಡಿಗರ ನಾಲ್ಕನೆಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮಾವೇಶ-೨೦೧೧**ರ ಸಮಾರೋಪ ಮತ್ತು ಅಭಿನಂದನ ಸಮಾರಂಭದಲ್ಲಿ ಮಾನ್ಯ ಕುಲಪತಿಗಳು ಮುಖ್ಯ ಅಭ್ಯಾಗತರಾಗಿ ಭಾಗವಹಿಸಿದ್ದರು. ಸಮಾರಂಭದಲ್ಲಿ 'ಸಂಸ್ಕೃತ ನಾಟಕಗಳಲ್ಲಿ ಸಾಮಾಜಿಕ ಮೌಲ್ಯ' ಕುರಿತು ಮಾನ್ಯ ಕುಲಪತಿಗಳು ವಿಶೇಷ ಉಪನ್ಯಾಸ ನೀಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಡಾ. ನಲ್ಲೂರು ಪ್ರಸಾದ್ ವಹಿಸಿದ್ದರು.

- ಶ್ರೀ ಕೊಳದಮಠ ಮಹಾಸಂಸ್ಥಾನದಲ್ಲಿ ದಿನಾಂಕ ೧೪.೦೬.೨೦೧೧ರಂದು ನಡೆದ **'ಅಲ್ಲಮಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ**ದಲ್ಲಿ ಮಾನ್ಯ ಕುಲಪತಿಗಳು

# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

## e ~ ಗ್ರಂಥಾಲಯ
## (ಅಂಗೈಯಲ್ಲಿ ವಿಶ್ವಕೋಶ)

**ಗಣಕಪ್ರಪಂಚದಲ್ಲಿ ಸಂಸ್ಕೃತ**

(ಲಭ್ಯವಿರುವ ಸಂಸ್ಕೃತವಾಙ್ಮಯದ e-text ಮೂಲಕ ಬೇಕಾದ ಮಾಹಿತಿಗಳನ್ನು ಕ್ಷಣಮಾತ್ರದಲ್ಲಿ ಹುಡುಕುವ ವಿಧಾನ)

E-mail: info.elib@gmail.com; skt.directorate@gmail.com; Ph: 080-2670 5596

**e-ಗ್ರಂಥಾಲಯ ಭೂಮಿಕೆ**

ವಿದ್ಯಾಸಂಸ್ಥೆಗಳಿಗೆ, ಅದರಲ್ಲೂ ವಿಶ್ವವಿದ್ಯಾಲಯವೊಂದಕ್ಕೆ ಗ್ರಂಥಾಲಯ ಎಷ್ಟು ಆವಶ್ಯಕ ಎಂದು ಹೇಳಬೇಕಾಗಿಲ್ಲ. ಜೊತೆಗೆ ಒಂದು ಒಳ್ಳೆಯ ಗ್ರಂಥಾಲಯವನ್ನು ನಿರ್ಮಿಸುವುದು, ಅದನ್ನು ರಕ್ಷಿಸುವುದು, ಬೇಕಾದವರಿಗೆ ಬೇಕಾದ ಪುಸ್ತಕವನ್ನು ನೀಡುವುದು, ಇವುಗಳ ದಾಖಲೆಗಳನ್ನು ಸರಿಯಾಗಿ ರಕ್ಷಿಸಿಡುವುದು ~ ಇವೆಲ್ಲಾ ಎಷ್ಟು ಸವಾಲಿನ ಕೆಲಸಗಳು ಎನ್ನುವುದನ್ನೂ ತಿಳಿಸಬೇಕಾಗಿಲ್ಲ. ಈ ಹಿನ್ನೆಲೆಯಲ್ಲಿ e~ಗ್ರಂಥಾಲಯದ ವಿಚಾರ ಬಹಳ ಪ್ರಸ್ತುತ.

**e-ಗ್ರಂಥಾಲಯ ಎಂದರೇನು?**

e ಎನ್ನುವುದು electronic ಎನ್ನುವುದರ ಸಂಕ್ಷಿಪ್ತರೂಪ. ಕಂಪ್ಯೂಟರಿನಲ್ಲಿ ಟೈಪ್ ಮಾಡಿ ಇಟ್ಟಿರುವ ಗ್ರಂಥಗಳ ಆಲಯ e~ಗ್ರಂಥಾಲಯ. ಕಾಡಿನಿಂದ ಮರಗಳನ್ನು ತಂದು, ಕಾಗದವನ್ನು ತಯಾರಿಸಿ, ಮುದ್ರಣಾಲಯದಲ್ಲಿ ಮಸಿಯಿಂದ ಅಕ್ಷರಗಳನ್ನು ಮೂಡಿಸಿ, ಹಾಳೆಗಳನ್ನು ಕತ್ತರಿಸಿ, ಬೈಂಡ್ ಹಾಕಿ ಸಿದ್ಧಪಡಿಸಿದರೆ ಪುಸ್ತಕಗಳು ಸಿದ್ಧ. ಇವುಗಳನ್ನು ಒಪ್ಪವಾಗಿ ಇಡಲು ಮರದ್ದೊ, ಕಬ್ಬಿಣದ್ದೊ ಕಪಾಟುಗಳನ್ನು ತಂದು ಮುದ್ರಿತ ಪುಸ್ತಕಗಳನ್ನು ಜೋಡಿಸಿಡಬೇಕು. ಗ್ರಂಥಾಲಯ ವಿಜ್ಞಾನ ಹೇಳುವಂತೆ ಸಂಕೇತಸಂಖ್ಯೆಗಳನ್ನು ನೀಡಬೇಕು. ಆಗಾಗ್ಗೆ ಧೂಳು ಜಾಡಿಸುವಂತಹ ಸಂರಕ್ಷಣಾಕಾರ್ಯಗಳ ಬಗ್ಗೆಯಂತೂ ಹೇಳುವುದೇ ಬೇಡ.

ಇದಕ್ಕೆ ವಿರುದ್ಧವಾಗಿ, ಬೇಕಾದರೆ ಅಂಗೈಯಗಲದ ಕಂಪ್ಯೂಟರಿನಲ್ಲೇ ಸಹಸ್ರಾರು ಪುಸ್ತಕಗಳನ್ನು ಸುಲಭವಾಗಿ ಇಟ್ಟುಕೊಳ್ಳಬಹುದಾದ ವ್ಯವಸ್ಥೆಯೇ e~ಗ್ರಂಥಾಲಯ!!

**e-ಗ್ರಂಥಾಲಯದ ಸೌಕರ್ಯ**

ಸ್ಥಳದ ಅಪೇಕ್ಷೆ ಬಹಳ ಕಡಿಮೆ. ಸಂರಕ್ಷಣೆಯ ವೆಚ್ಚ ಅತ್ಯಲ್ಪ. ಒಂದೇ ಪುಸ್ತಕವನ್ನು ಎಷ್ಟು ಜನ ಬೇಕಾದರೂ ಪಡೆಯಬಹುದು.

**ಸಂಸ್ಕೃತದಲ್ಲಿ e-ಗ್ರಂಥಾಲಯ.**

ಭಾಷಾಕ್ಷೇತ್ರದಲ್ಲಿ ಕಂಪ್ಯೂಟರಿನ ಬಳಕೆ ಆರಂಭವಾದ ಹೊಸತರಿಂದಲೂ ಸಂಸ್ಕೃತದ ಕೆಲಸ ನಡೆದುಕೊಂಡು ಬಂದಿದೆ. ವಿಶ್ವದಾದ್ಯಂತ ಇರುವ ಸಂಸ್ಕೃತಪ್ರೇಮಿಗಳು ಆತ್ಮಸಂತೋಷಕ್ಕಾಗಿ, ಸಾರಸ್ವತ ಸೇವೆಯೆಂಬ ಭಾವನೆಯಿಂದ ಅಥವಾ ವಿವಿಧ ಯೋಜನೆಗಳ ಅಂತರ್ಗತವಾಗಿ ಸಂಸ್ಕೃತವಾಙ್ಮಯದ ಅಪೂರ್ವ ಸಂಪತ್ತನ್ನು ಟೈಪ್ ಮಾಡಿ ಅಂತರ್ಜಾಲದಲ್ಲಿ ಸಿಗುವಂತೆ ಮಾಡಿದ್ದಾರೆ. ಲಾಭೋದ್ದೇಶವಿಲ್ಲದ ಶೋಧನಾಕಾರ್ಯಗಳಿಗೆ ಇವನ್ನು ಧಾರಾಳವಾಗಿ ಉಪಯೋಗಿಸಬಹುದು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಬೆಂಗಳೂರಿನ ಪೂರ್ಣಪ್ರಜ್ಞವಿದ್ಯಾಪೀಠ ಸಂಸ್ಕೃತ ಕಾಲೇಜು ಹೀಗೆ ಲಭ್ಯವಿರುವ ಸಾವಿರಾರು ಅಪೂರ್ವ~ಗ್ರಂಥಗಳನ್ನು ಹಲವಾರು ವರ್ಷಗಳಿಂದ ಒಂದೆಡೆ ಸಂಗ್ರಹಿಸಿದೆ. ಈ ಸಂಗ್ರಹವನ್ನು ಆಧರಿಸಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ e~ಗ್ರಂಥಾಲಯವನ್ನು ಆರಂಭಿಸುವ ಉದ್ದೇಶವಿದೆ. ಇದು ಮೊದಲ ಹೆಜ್ಜೆಯಷ್ಟೆ. ಇದೇ ವಿಧದಲ್ಲಿ ಇನ್ನೂ ಬೇಕಾದಷ್ಟು ಜನಗಳು ಸಂಗ್ರಹ ಮಾಡಿರಬಹುದು. ಕಾಲಕ್ರಮದಲ್ಲಿ ಅವೆಲ್ಲ ಸೇರಿದರೆ ಸಂಸ್ಕೃತಕ್ಷೇತ್ರಕ್ಕೆ ಮತ್ತೂ ದೊಡ್ಡ ಲಾಭವಾಗುವುದರಲ್ಲಿ ಸಂಶಯವಿಲ್ಲ.

**e-ಗ್ರಂಥಾಲಯದ ಉಪಯೋಗ**

1. ಸದ್ಯ e~ಗ್ರಂಥಾಲಯದಲ್ಲಿ 4000ಕ್ಕೂ ಅಧಿಕ ಫೈಲುಗಳಿವೆ. ವೇದ~ಉಪನಿಷತ್ತು~ವೇದಾಂಗ~ಚತುರ್ದಶವಿದ್ಯಾಸ್ಥಾನಗಳು ~ ಹೀಗೆ ಪ್ರಾಚೀನಭಾರತದ ಜ್ಞಾನವಿಜ್ಞಾನಗಳಿಗೆ ಸಂಬಂಧಿಸಿದ, ಇಂದು ಮಾರುಕಟ್ಟೆಯಲ್ಲಿ ಹಣ ನೀಡಿದರೂ ಸಿಗದ ಅತ್ಯಪೂರ್ವಗ್ರಂಥಗಳು ಇದರಲ್ಲಿ ಸೇರಿವೆ. ಇವೆಲ್ಲ ಸಾವಿರಾರು ವರ್ಷಗಳ ಹಿಂದೆ ರಚಿತವಾಗಿದ್ದು ಕಾಪಿರೈಟ್ ಸಮಸ್ಯೆಯಿಂದ ಮುಕ್ತವಾಗಿವೆ.
2. ಕಂಪ್ಯೂಟರಿನಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಂಡು ನಮಗೆ ಬೇಕಾದ ವಿಷಯಗಳನ್ನು ಈ ಗ್ರಂಥಗಳಲ್ಲಿ ಹುಡುಕುವುದು ಬಹಳ ಸುಲಭ. ಉದಾಹರಣೆಗೆ ~
   ಅ. ಒಂದು ಲಕ್ಷ ಶ್ಲೋಕಗಳಿರುವ ಮಹಾಭಾರತದಲ್ಲಿ ಕೃಷಿಯ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ಕರಾರುವಕ್ಕಾಗಿ ಅತ್ಯಲ್ಪ ಸಮಯದಲ್ಲಿ e~ಗ್ರಂಥಾಲಯದ ಸಹಾಯದಿಂದ ಹುಡುಕಬಹುದು.

# लोकार्पितं कर्नाटकसंस्कृताध्ययनम्

जून् मासस्य २० दिनाङ्के कर्णाटकसर्वकारस्य महामहिमा राज्यपालः डा ॥ हंसराजभारद्वाजवर्यः कर्नाटकसंस्कृतविश्वविद्यालयस्य “कर्नाटकसंस्कृताध्ययनम्” इति षाण्मासिकं शोधपत्रं लोकाय अर्पितवान् ।

“भारतदेशे स्वातन्त्र्यात्पूर्वं बहुषु विश्वविद्यालयेषु संस्कृतं बोध्यते स्म । परन्तु स्वातन्त्र्यप्राप्त्युत्तरकाले अस्य ह्रासः जातः । विपुला ज्ञानसम्पद् संस्कृतभाषायाम् उपलभ्यते । महास्फोटसिद्धान्तादारभ्य वैज्ञानिकविषयपर्यन्तं नैके विषयाः संस्कृतभाषासाहित्ये अन्तर्गताः सन्ति । अतः, वर्तत एव संस्कृताध्ययनस्य भाषासंशोधनस्य च प्राधान्यम् । एतद्विषये कर्नाटकसंस्कृतविश्वविद्यालयेन योग्यं कार्यं क्रियमाणं वर्तत” इति सः अवदत् ।

भारतसर्वोच्चन्यायालयस्य भूतपूर्वः मुख्यन्यायाधीशः मान्यः एम्. एन्.वेङ्कटाचलय्यवर्यः आध्यक्षभाषणं विदधानः – “संस्कृतभाषायाः गरिमां, युरोपीयभाषाणां तुलनात्मकांशान् च प्रस्तुतवान् । संस्कृतभाषासाहित्यं विश्वभाषासाहित्ये मातृस्थाने वर्तते” इति सः अकथयत् ।

मुख्यातिथिभाषणं कुर्वन् भारतीयविद्याभवनस्य व्यवस्थापकनिर्देशकः पद्मश्रीविभूषितः डा ॥ मत्तूरु कृष्णमूर्तिवर्यः संस्कृतसम्भाषणस्य महत्त्वं विवृण्वन्, तद्विषये प्रशासनस्य, संस्थानां विदुषाञ्च प्रयत्नः कथं स्यादिति विषये स्वाभिप्रायं प्राकटयत् ।

वेदविज्ञानशोधसंस्थायाः निदेशकाः डा ॥ कोटेमने रामचन्द्रभ ाः शोधपत्रस्य परिचयं कारयन्तः सम्पादकस्य परिश्रममपि प्रशंसितवन्तः ।

कर्नाटकसंस्कृतविश्वविद्यालयस्य कुलपतिः आचार्यः मल्लेपुरं जि. वेङ्कटेशवर्यः उपस्थितान् गण्यान् स्वागतवचनैः पुरस्कुर्वन् विश्वविद्यालयस्य नूतनकार्यक्रमान् विवृतवान् ।

शोधपत्रस्य सम्पादकः डा ॥ एम्. के. श्रीधरवर्यः शोधपत्रस्य स्वरूपम् अवर्णयत् । कर्नाटकसंस्कृतविश्वविद्यालयस्य कुलसचिवः डा ॥ चन्द्रमौलि एस्. नाय्करवर्यः धन्यवाद–समर्पणम् अकरोत् । भूतपूर्वविधानपरिषत्सदस्यः प्रो. कृ. नरहरिवर्यः, ख्यातः आयुर्वेदवैद्यः डा ॥ जयप्रकाशनारायणवर्यः, अन्ये गण्याश्च कार्यक्रमेऽस्मिन् उपस्थिताः आसन् ।



**“कर्नाटकसंस्कृताध्ययनं” शोधपत्रस्य लोकार्पणसमारम्भे भाषमाणः मान्यवरः राज्यपालः डा ॥ हंसराजभारद्वाजवर्यः**

**सन्दर्शकः** – पूर्वकालापेक्षया सम्प्रति संस्कृतस्य प्रोत्साहः अधिकः अस्ति इति भावयन्ति वा ?

**आचार्यः** – आम् । सर्वकाराः संस्कृतं अधिकतया प्रोत्साहयन्ति । भारतसर्वकारेण संस्कृतस्य कृते शतशः कोटिरूप्यकाणि पञ्चवार्षिकयोजनाङ्गतया प्रदीयन्ते । किन्तु दर्शनशास्त्रस्य इतरज्ञानप्रकारस्य च आमूलाग्रं पाठयितारः न सन्ति । अध्येतारोऽपि न । इत्थं शास्त्राणां प्रौढस्तरीयम् अध्ययनं स्वाप्निकम् । सर्वत्र संस्कृतं भाषात्वेन प्राथमिकस्तरे अत्यल्पप्रमाणेन अधीयते । कर्णाटकसंस्कृत-विश्वविद्यालयोऽपि संस्कृतं भाषारूपेण बोधयितुं नवीनयोजनां निरूपयतु । एतेन संस्कृतस्य प्रथमं सोपानं सुरक्षितं स्यात् ।

**सन्दर्शकः** – द्वैतम्, अद्वैतम्, विशिष्टाद्वैतम्, शक्तिविशिष्टाद्वैतञ्चेति वेदान्ताशाखाः अनुभवैकवेद्याः । किन्तु सम्प्रति अनुभवमन्तरा मिथः कलहः प्रवर्तते खलु ?

**आचार्यः** – सामयिकोऽयं प्रश्नः । उपनिषत्, ब्रह्मसूत्रं भगवद्गीतेति प्रस्थानत्रयम् अधिकृत्य यथानुभवं आचार्यैः व्याख्यारूपेण भाष्यं विरचितम् । तदधीत्य, तत्त्वं अनुसन्धाय च साक्षात्कर्तव्यम् । अयमेव जीवनस्य चरमं ध्येयम् । सः साक्षात्कारः शततमं सोपानम् । वयन्तु द्वितीयं तृतीयं वा सोपानं आरूढाः । अप्रत्यक्षं दृश्यं यथाकथञ्चित् ऊहयित्वा वादविवादे निमग्नाः । खण्डनाय मण्डनाय च असङ्ख्याताः लेखाः ग्रन्थाश्च प्रकाशिताः । रागद्वेषाः वर्धिताः । मनश्शान्तिः नैव लब्धा । एतस्मिन् अवसरे अयम् अंशः स्मर्तव्यः ।

**शमार्थं सर्वशास्त्राणि विहितानि मनीषिभिः ।**
**स एव सर्वशास्त्रज्ञः यस्य शान्तमिदं मनः ॥**

**सन्दर्शकः** – वेदशास्त्राधिकारः सीमितो वा ?

**आचार्यः** – सर्वथा न । आसक्तास्सर्वे अधिकारिणः । जनानां मनांसि समीकर्तुं संस्कर्तुं च वेदशास्त्राणि प्रवृत्तानि । अतः आसक्ताः सर्वे वेदशास्त्राध्ययनं कुर्युः । महिलाः अपि अधिकारिण्यः इति न पुनर्वक्तव्यं किल ?

**सन्दर्शकः** – तत्रभवताम् अध्ययनकालः कीदृशः आसीत् किं किञ्चित् उच्येत?

**आचार्यः** – अहो! अवश्यम् । मन्नामानौ उभौ दिवङ्गतौ । ई.एस्. वरदाचार्यः मीमांसकः, एस्. वरदाचार्यः वैयाकरणः च मम सतीर्थ्यौ । वयं वरदत्रयम् इति प्रथिताः । अस्माकं गुरवः दीक्षाचार्याः । वयं गृहात् संस्कृतपाठशालां प्रति पद्भ्याम् एव अगच्छाम । गमनकाले सूत्रभाष्ययोः आवृत्तौ अस्माकं प्रवृत्तिः आसीत् । एतत् दृष्ट्वा गृहस्थाः हसन्तः वदन्ति स्म – तेषां वृक्षाणामपि सूत्रभाष्यं कण्ठस्थं जातम् इति । तदा अस्माकम् एकांशः एव कार्यक्रमः । स च शास्त्रचिन्तनम् । न भूतभविष्यतोः चिन्ता । स्वाध्यायं तप इति अस्माकं भावना आसीत् ।

**सन्दर्शकः** – गुरुकुलस्थापनस्य उद्देशः कः ?

**आचार्यः** – इदं प्रायोगिकं गुरुकुलम् । नेपालीयः उद्यमपतिः प्रतिमासं विंशति-सहस्ररूप्यकानुदानं प्रयच्छति । तेषां सदाशयेन इदं गुरुकुलं प्रचलति । अत्र नेपालीयाः छात्रा एव शास्त्राध्ययननिरताः । ज्ञानदृष्ट्या न, परीक्षादृष्ट्या ।

**सन्दर्शकः** – धन्योऽस्मि ।

ಇಂದ,

**ಕುಲಸಚಿವರು**

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

**ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ**

**ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ**

**ಬೆಂಗಳೂರು – 560 018.**

**ದೂರವಾಣಿ: 080 – 2670 1303**

**Book-Post**

ಇವರಿಗೆ,

**Vartha Patram:** *Quarterly news bulletin of Karnataka Samskrit University, Vol. 1, No. 1. Pub. by the* ***Registrar for Karnataka Samskrit University****, Sri Chamarajendra Samskrit College Campus, Pampamahakavi Road, Chamarajapete, Bangalore - 560 018, Phone: 080-2670 1303 & Printed at* ***Satyasri Printers Pvt. Ltd.****, # 16/1, 3rd Cross, 2nd Main, Kasturaba Nagar, Mysore Road, Bangalore - 560 026, Phone: 080-26748811.*